ಅದಕ್ಕೆ ಒಂದು ಸಣ್ಣ ಸಲಹೆ ಎಂದರೆ ನೀವು ಯಾರನ್ನೇ ದಸ್ತಗಿರಿ ಮಾಡುವಾಗಲೂ, ದಸ್ತಗಿರಿ ಮಾಡಿದ ತಾರೀಖು, ದಸ್ತಗಿರಿ ಮಾಡಿದ ಸಮಯ, ಇದನ್ನು ಬರವಣಿಗೆಯಲ್ಲಿ ಅವರ ಕೈಯಲ್ಲಿ ಕೊಡಬೇಕು. ಆತನು ತನಗೆ ಇಷ್ಟ ಬಂದವರ ಕೈಯಲ್ಲಿ ಆ ಚೀಟಿಯನ್ನು ಕೊಟ್ಟು ಪೋಲೀಸರ ಜೊತೆಯಲ್ಲಿ ಹೋಗಬಹುದು. ಇಂಥ ಒಂದು ಸಣ್ಣ ತಿದ್ದುಪಡಿಯನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ಗೆ ಮಾಡಬೇಕು. ಇದರಿಂದ ಲಾಕ್‌ಅಪ್‌ಡೆತ್ ಬಹಳ ಕಡಿಮೆಯಾಗುತ್ತದೆ. We do not know, when, and where he has been arrested and How long he has been kept in detenation. ಈ ಒಂದು ಸಣ್ಣ ತಿದ್ದುಪಡಿಯನ್ನು ಮಾಡಿ. ಮೇಲ್ವರ್ಗದವರಿಗೆ ಈ ಹಕ್ಕಗಳು ಈಗ ಇವೆ. ಪ್ರಿವೆಂಟಿವ್ ಡಿಟೆನ್‌ಶನ್‌ನಲ್ಲಿ, ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್‌ನಲ್ಲಿ, ಎಲ್ಲದರಲ್ಲೂ ಈ ಹಕ್ಕುಗಳು ನಮಗೆ ಇವೆ. ಮೇಲ್ಮಟ್ಟದಲ್ಲಿರುವ ನಮಗೆ ಆ ಹಕ್ಕುಗಳು ಇವೆ. ಆದರೆ ಸಾಮಾನ್ಯ ಮನುಷ್ಯರಿಗೂ ಆ ಕ್ರಿಮಿನಲ್ ಪ್ರೊಸೀಜರ್‌ಕೋಡ್ ಆ ಹಕ್ಕನ್ನು ಕೊಡಬೇಕಾಗಿದೆ ಅಷ್ಟೆ. ಇಷ್ಟು ಸಣ್ಣ ತಿದ್ದುಪಡಿ ತಂದು ಬಿಡಿ. ಯಾರನ್ನು ಬೇಕಾದರೂ ಅರೆಸ್ಟ್ ಮಾಡಿ ಆದರೆ ಯಾವಾಗ ಮತ್ತು ಯಾವ ಸಮಯದಲ್ಲಿ ಮಾಡಿದ್ದು ಎಂಬ ಬಗ್ಗೆ ಬರವಣಿಗೆಯಲ್ಲಿ ಆ ಮನುಷ್ಯನಿಗೆ ಕೊಡಿ. ಆತ ತನಗೆ ಇಷ್ಟ ಬಂದವರ ಕಡೆಗೆ ಅದನ್ನು ಕೊಟ್ಟು ಪೋಲೀಸರ ಜೊತೆಗೆ ಹೋಗುತ್ತಾನೆ. ಈ ಒಂದು ಸಣ್ಣ ತಿದ್ದುಪಡಿಯನ್ನು ದಯಮಾಡಿ ಮಾಡಿ. ಇದರಿಂದ ಲಾಕ್‌ಅಪ್‌ಡೆತ್ಸ್‌ನ್ನು ಎಷ್ಟು ಕಡಿಮೆಯಾಗುತ್ತದೆ ಎಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ :-ಪ್ರೊಫೆಸರ್ ನಂಜುಂಡಸ್ವಾಮಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಪ್ರೊ : ಎಂ. ಡಿ. ನಂಜುಂಡಸ್ವಾಮಿ :- ನಾನು ಇದನ್ನು ಯಾತಕ್ಕೆ ಹೇಳುತ್ತಿದ್ದೇನೆ ಅಂದರೆ, ಈ ಸದನದಲ್ಲಿ ನಾನು ಖಾಸಗಿ ಮಸೂದೆಯನ್ನು ಮಂಡಿಸಿದ್ದೆ. ನಿಮ್ಮ ಸರಕಾರದವರು ಇದನ್ನು ಪ್ರತಿಷ್ಠೆ ಮಾಡಿಕೊಂಡು ಧ್ವನಿಮತದಿಂದ ಬೀಳಿಸಿದರು. ತಾವುಗಳು ಇದನ್ನು ಅಧಿಕೃತವಾಗಿ ಹೊರಡಿಸಿದರೆ ನಾನೇ ಅದಕ್ಕೆ ಮೊದಲ ಮತವನ್ನು ಹಾಕುತ್ತೇನೆ.

## ಆಶ್ರಯ ಯೋಜನೆಯಡಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ

ಶ್ರೀ ಬಿ. ಎಸ್. ಯಡಿಯೂರಪ್ಪ :-ಮಾನ್ಯ ಅಧ್ಯಕ್ಷರೇ, ತಾವು ಅಪ್ಪಣೆ ಕೊಡಿಸಿದ್ದೀರಿ, ಆಶ್ರಯ ಯೋಜನೆ ಬಗ್ಗೆ ಸಿಓಡಿ ಏನೊಂದು ಇಂಟ್ರೀಮ್ ರಿಪೋರ್ಟ್ ಕೊಟ್ಟಿದೆ, ಅದರ ಬಗ್ಗೆ ಟೇಬಲ್ ಮಾಡಬೇಕೆನ್ನುವಂಥಾದ್ದು ಮತ್ತು ಎರಡನೆಯದಾಗಿ ಪೂರ್ಣವಾಗಿ ಗೃಹಮಂಡಳಿಯ ಬಗ್ಗೆ ಮತ್ತು ಅಲ್ಲಿ ಆಗಿರುವಂಥ ಅವ್ಯವಹಾರಗಳ ಬಗ್ಗೆ, ಸಿಓಡಿ ತನಿಖೆ ಮಾಡಿಸ ಬೇಕೆನ್ನುವಂಥಾದ್ದು ನನ್ನ ವಾದ ಇದ್ದು ಅದಕ್ಕೆ ಪೂರಕವಾಗಿ ಅನೇಕ ದಾಖಲೆಗಳನ್ನು ಕೊಟ್ಟಿದ್ದೇನೆ. ನನ್ನ ಹತ್ತಿರ ದಾಖಲೆಗಳು ಮತ್ತು ವಿವರಗಳು ಇವೆ. ಅದಕ್ಕೋಸ್ಕರವಾಗಿ ಮುಖ್ಯಮಂತ್ರಿಗಳು ಬಂದ ಮೇಲೆ ಅವರಲ್ಲಿ ಸಿಓಡಿ ಇಂಟ್ರೀಮ್ ರಿಪೋರ್ಟ್ ಇದ್ದರೆ ಅದನ್ನು ಸದನದ ಮುಂದಿಡುವ ಏರ್ಪಾಡು ಮಾಡುತ್ತೇನೆ ಎಂದು ಹೇಳಿದ್ದೀರಿ. ಆದ್ದರಿಂದ ಇಂಥ ಗಂಭೀರವಾದ ವಿಚಾರದ ಬಗ್ಗೆ ಅವರಿಗೆ ಸಿಓಡಿ ಇಂಟ್ರೀಮ್ ರಿಪೋರ್ಟ್ ಬಂದಿದೆಯೋ ಅಥವಾ ಇಲ್ಲವೊ? ಅದನ್ನು ಇಲ್ಲಿ ಇಡಲು ಅವರಿಗೆ ತೊಂದರೆ ಏನಿದೆ ಎಂಬುದನ್ನು ಹೇಳಬೇಕು. ಅದನ್ನು ಟೇಬಲ್ ಮಾಡುವುದಕ್ಕೆ ತೊಂದರೆ ಏನಿದೆ? ಅದರಲ್ಲಿ ಯಾರು ಯಾರ ಮೇಲೆ ಆರೋಪ ಇದೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಎಂಟೈರ್ ಗೃಹಮಂಡಳಿಯ ವ್ಯವಹಾರದ ಬಗ್ಗೆ ತಾವು ಸಿ.ಓ.ಡಿ. ಯಿಂದ ತನಿಖೆಯನ್ನು ಮಾಡಿಸಬೇಕೆಂದು ನಾನು ನಿನ್ನೆಯಿಂದ ಹೇಳುತ್ತಿದ್ದೇನೆ. ಸುಮಾರು 20 ಕೋಟಿ ರೂಪಾಯಿಯ ಅವ್ಯವಹಾರ ಮನೆ ಕಟ್ಟುವುದರ ಬಗ್ಗೆ ಆಗಿದೆ. ಕಟ್ಟುವಂತಹ ದುಡ್ಡನ್ನು ಬೇರೆ ಯಾರಿಗೂ ಕಂಟ್ರಾಕ್ಟದಾರರಿಗೆ ಕೊಟ್ಟು ಇದನ್ನು ಮಾಡಿದ್ದಾರೆ, ಇನ್ನೂ ಉಳಿದಂಥದ್ದು ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರಗಳು ನಡೆದಿದೆ. ಎಂಟೈರ್

ಗೃಹಮಂಡಳಿಯ ವ್ಯವಹಾರಗಳು ಏನಿದೆ, ಅವತ್ತು ಮಾನ್ಯ ಕಾಗೋಡ್ ತಿಮ್ಮಪ್ಪನವರು ಏನು ಅಧ್ಯಕ್ಷರಾಗಿದ್ದರು. ಅವತ್ತಿನಿಂದ ಇವತ್ತಿನವರೆಗೂ ಎನ್‌ಕ್ವಯರಿಯನ್ನು ಮಾಡಿಸಬೇಕು ನನ್ನ ಹತ್ತಿರ ಅನೇಕ ದಾಖಲೆಗಳು ಇವೆ. ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ. ಇಂಟರಿಯಮ್ ವರದಿಯನ್ನು ಸಿಓಡಿಯವರು ತನಿಖೆಯನ್ನು ಮಾಡಿ ಕೊಟ್ಟಿದ್ದಾರೆ. ಅದನ್ನು ಟೇಬಲ್ ಮೇಲೆ ಇಡಬೇಕು. ಅದರ ಮೇಲೆ ಉಳಿದಂತಹ ಅನೇಕ ವಿಷಯಗಳನ್ನು ಚರ್ಚೆ ಮಾಡುವುದರಿಂದ ಸರ್ಕಾರಕ್ಕೆ ಅನುಕೂಲವಾಗುತ್ತದೆ. ನಾನು ದಾಖಲೆಗಳನ್ನು ಕೊಡುತ್ತೇನೆ. ಮತ್ತು ಇದರ ಬಗ್ಗೆ ಬೆಳಕು ಚೆಲ್ಲುತ್ತೇನೆ ತಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ದಯಮಾಡಿ ಆ ವರದಿಯನ್ನು ಇಡಬೇಕು.

ಶ್ರೀ ಆರ್. ಜಾಲಪ್ಪ :- ಮಾನ್ಯ ಅಧ್ಯಕ್ಷರೆ....

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ, ತಾವು ಉದ್ದೇಶಪೂರ್ವಕವಾಗಿ ಈ ಸದನದಲ್ಲಿ ಆಶ್ರಯದ ಅವ್ಯವಹಾರದ ಪ್ರಶ್ನೆ ಬಂದಾಗ ಮುಖ್ಯಮಂತ್ರಿಗಳು ಇದ್ದರೂ ಸಹ ಅದನ್ನು ಆ ಕಡೆಗೆ ತಿರುಗಿಸಿ ಅದರ ಮಹತ್ವವನ್ನು ಹಾಳು ಮಾಡುತ್ತಿದ್ದೀರಿ. ನನಗೆ ಜಾಲಪ್ಪನವರ ಬಗ್ಗೆ ಅಭಿಮಾನ ಇದೆ. ಇವತ್ತು ನಾನೊಂದು ಪ್ರಶ್ನೆಯನ್ನು ಕೇಳಿದಾಗ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟ ನಂತರ ಬೇರೆ ವಿಷಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೇ, ಅವರು ಹೇಳುತ್ತೇನೆಂದು ಹೇಳಿದ್ದಾರೆ. ತಾವು ಅವರ ಗಮನಕ್ಕೆ ತಂದಿದ್ದೀರಿ, ಅದನ್ನು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ :- ಅವರು ಇಂಟರಿಯಮ್ ರಿಪ್ಲೈ ಕೊಡಬೇಕು. The interim reply will have to be tabled. We don't want to interfere in the C.O.D. enquiry. ಆದರೆ ಪತ್ರಿಕೆಯಲ್ಲಿ ಸಾಕಷ್ಟು ಬರುತ್ತಿದೆ. ಅರೆಸ್ಟ್ ಮಾಡುತ್ತಿದ್ದೀರಿ. ನೀವು ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ, ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಅದೆಲ್ಲಾ ಗೊತ್ತಾಗಬೇಕು. ಹಾಗಾಗಿ ಅವಶ್ಯಕತೆ ಇದ್ದರೆ ನಿಮ್ಮ ಸಿಓಡಿ ತನಿಖೆಯನ್ನು ಮುಂದುವರೆಸಬೇಕಾಗುತ್ತದೆ. Whether it requires full investigation in the - Housing Board affairs. ಅದನ್ನು ನೋಡಬೇಕಾಗುತ್ತದೆ. ಆದ್ದರಿಂದ ಸ್ಟೇಟ್‌ಮೆಂಟ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ :- ನಾನು ಈಗಾಗಲೇ ತಮ್ಮ ಕೊಠಡಿಗೆ ಬಂದು ಒಂದು ಪತ್ರವನ್ನು ತಮಗೆ ಕೊಟ್ಟಿದ್ದೇನೆ. ನಾನು ಪ್ರಿವಿಲೇಜ್ ಅನ್ನು ಮೂವ್ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈಗ ಸದನದಲ್ಲಿ ಇದ್ದಾರೆ. ಅವರು ಬಹಳ ಅನುಭವಸ್ಥರು ಅವರು ಬಹಳ ವರ್ಷಗಳಿಂದ ಈ ಸದನದಲ್ಲಿ ಇದ್ದಾರೆ. ಎಲ್ಲಾ ರೀತಿಯ ಅಧಿಕಾರದಲ್ಲಿಯೂ ಅವರು ಇದ್ದಾರೆ. ಮೊನ್ನೆ ಬೇಡಿಕೆಗಳ ಮೇಲೆ ಚರ್ಚೆಗೆ ಉತ್ತರವನ್ನು ಕೊಡುತ್ತಾ ಒಂದು ಮಾತನ್ನು ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಆಶ್ರಯ ಯೋಜನೆಯ ಬಗ್ಗೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಆರ್.ಎಲ್. ಜಾಲಪ್ಪ :- ತಾವು ಅಪ್ಪಣೆಯನ್ನು ಕೊಟ್ಟಿದ್ದೀರಿ. ನಾನು ಮಾತನಾಡುತ್ತಿದ್ದೇನೆ. ಆಶ್ರಯದ ಬಗ್ಗೆ ಮಾತನಾಡಲಿ, ಮಾತನಾಡಬೇಡಿ ಎಂದು ಹೇಳುತ್ತಿಲ್ಲ. ಅದಕ್ಕಿಂತ ನನಗೆ ಇದು ಬಹಳ ಮುಖ್ಯವಾದುದು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಬೇರೆ ವಿಷಯವನ್ನು ಚರ್ಚೆಮಾಡಲು ಅಪ್ಪಣೆಯನ್ನು ಕೊಟ್ಟರಿ. ತಮಗೆ ಸರಿ ಅಂದರೆ ನನಗೆ ವಿರೋಧ ಇಲ್ಲ.

ಅಧ್ಯಕ್ಷರು :- ಅವರ ಗಮನಕ್ಕೆ ತಂದಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಆಶ್ರಯ ಯೋಜನೆಯ ಬಗ್ಗೆ ಜಾಲಪ್ಪನವರು ಮಾತನಾಡಿದರೆ ನನ್ನದೇನು ವಿರೋಧ ಇಲ್ಲ. ಸಿಓಡಿಯ ಇಂಟೆರಿಯಮ್ ವರದಿಯ ಬಗ್ಗೆ ಟೇಬಲ್ ಮಾಡಬೇಕೆಂದು ನಾನು ಪ್ರಸ್ತಾಪಮಾಡಿದ್ದೇನೆ. ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದರು. ಇವರು ಉದ್ದೇಶಪೂರ್ವಕವಾಗಿ ಇದಕ್ಕೆ ಇರುವ ಮಹತ್ವವನ್ನು ಕಡಿಮೆ ಮಾಡಬೇಕೆನ್ನುವಂತಹ ಶಂಕೆ ನನ್ನಲ್ಲಿ ಮೂಡುತ್ತಿದೆ.

ಶ್ರೀ ಆರ್.ಎಲ್. ಜಾಲಪ್ಪ :- ನೀವು ಈ ತರಹ ಮಾತನಾಡಬೇಡಿ. You have to call him to order.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಿಮ್ಮ ಬಗ್ಗೆ ಅಲ್ಲ , ನಾನು ನಿಮಗೆ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ನೆನ್ನೆ ಬೆಳಿಗ್ಗೆಯಿಂದ ಧರಣಿ ಕುಳಿತಿದ್ದೇನೆ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ :- ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಬಗ್ಗೆ ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ಕೆಲವರು ಕಾಗೋಡು ತಿಮ್ಮಪ್ಪನವರಿಗೆ ಗೃಹಮಂಡಳಿಯ ಅಧ್ಯಕ್ಷರಿಗೆ ಸಹಕಾರವನ್ನು ಕೊಡುವುದಕ್ಕೋಸ್ಕರ ಇವರು ಅನೇಕ ಭ್ರಷ್ಟಾಚಾರದ ಹಗರಣಗಳು ಬಯಲಾಗುತ್ತದೆನ್ನುವ ಭಯದಿಂದ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಬಿಡುತ್ತಿಲ್ಲ, ಕೆಲವರು ಎಂದು ಹೇಳುತ್ತಿದ್ದೇನೆ. ನಿಮ್ಮ ಬಗ್ಗೆ ಅಲ್ಲ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ಮಾನ್ಯ ಯಡಿಯೂರಪ್ಪನವರು ಜಾಲಪ್ಪನವರ ಮೇಲೆ ಆರೋಪವನ್ನು ಮಾಡುವುದಕ್ಕೆ ಹೊರಟರು ಇದು ಸರಿಯಲ್ಲ. ಮುಖ್ಯಮಂತ್ರಿಗಳು ಇದ್ದಾರೆ. ಅವರಿಗೆ ನಾನು ಹೇಳಿದ್ದೇನೆ ಅವರು ಏನು ಅದಕ್ಕೆ ಉತ್ತರವನ್ನು ಕೊಡುತ್ತಾರೊ ಅದನ್ನು ಕೊಡುತ್ತಾರೆ. ಆದರೆ ತಾವು ಎದ್ದು ನಿಂತು ಜಾಲಪ್ಪನವರಿಗೆ ಆ ರೀತಿ ಮಾತನಾಡಿದರೆ ಅದು ಸರಿಯಾಗುವುದಿಲ್ಲ. ಅದಕ್ಕೆ ಮುಖ್ಯಮಂತ್ರಿಗಳು ಏನು ಉತ್ತರವನ್ನು ಕೊಡಬೇಕೋ ಅದನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಜಾಲಪ್ಪನವರ ಮೇಲೆ ಹೇಳಿಲ್ಲ ವಿರೋಧಪಕ್ಷದ ಕೆಲವು ಸದಸ್ಯರು ಇದರ ಮಹತ್ವವನ್ನು ಹಾಳುಮಾಡಬೇಕೆನ್ನುವ ದುರುದ್ದೇಶದಿಂದ ಇದು ಬಯಲಾಗಬಹುದು ಎನ್ನುವ ಭಯದಿಂದ ಹೇಳುತ್ತಿದ್ದಾರೆ. ನಾನು ಕೆಲವರು ಅಂತ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ನಿನ್ನೆ ಬೆಳಿಗ್ಗೆನೇ ಈ ವಿಷಯವನ್ನು ಪ್ರಾರಂಭ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ ಎನ್ನುವಂತಹ ಒಂದೇ ಉದ್ದೇಶಕ್ಕೆ ತಾವು ಈ ವಿಷಯವನ್ನು ಮುಂದಕ್ಕೆ ಹಾಕಿದ್ದೀರಿ.

ಶ್ರೀ ಎ.ಕೆ. ಅನಂತಕೃಷ್ಣ :- ಅಸಂಭದ್ಧ ಆರೋಪಗಳನ್ನು ಕಡತಗಳನ್ನು ಕಿತ್ತುಹಾಕಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಇವತ್ತು ಬೆಳಿಗ್ಗೆಯಾದರೂ ಕೊಡಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ನಿಮ್ಮನ್ನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಡಿಯೂರಪ್ಪನವರೇ ನೀವು ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ನೀವು ನನ್ನ ರಕ್ಷಣೆಗೆ ಬರಬೇಕು.

(ಗೊಂದಲ)

ಈ ಕಡೆ ಕುಳಿತಿರುವಂತಹ ಕೆಲವರು ಉದ್ದೇಶಪೂರ್ವಕವಾಗಿ ಇದನ್ನು ಮುಚ್ಚಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ವಿರೋಧ ಪಕ್ಷದಲ್ಲಿ ನಾವು ಕುಳಿತುಕೊಂಡು ಪ್ರಸ್ತಾಪ ಮಾಡಿದಾಗ ನನಗೆ ಕೇಳುವುದಕ್ಕೆ ಅಧಿಕಾರ ಇಲ್ಲವೆ? ಅದಕ್ಕೆ ಉತ್ತರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಕೇಳುವುದಕ್ಕೆ ರೆಡಿ ಇದ್ದೇನೆ. ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಎದ್ದಾಗ ಬೇರೆ ಬೇರೆ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದರೆ ಹೇಗೆ? ಉತ್ತರವನ್ನು ಕೇಳುವುದಕ್ಕೆ ಅಧಿಕಾರ ಇಲ್ಲ ಅಂತ ಅಂದರೆ ನಾನು ಹೊರಗೆ ಹೋಗುತ್ತೇನೆ.

(ಗೊಂದಲ)

ಅಧ್ಯಕ್ಷರು :- ಉತ್ತರ ಕೇಳುವುದಕ್ಕೆ ಅಲ್ಲ ತಾವು ಸ್ವಲ್ಪ ಸಮಾಧಾನ ರೀತಿಯಲ್ಲಿ ಕೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ :- ನಾವು ನಿಲುವಳಿ ಸೂಚನೆಯನ್ನು ನಿನ್ನೆಗೆ ಕೊಟ್ಟಿದ್ದೆವು. ತಾವೇ ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಹೇಳುತ್ತೇವೆಂದು ಹೇಳಿದ್ದೀರಿ. ನಾನು ಹೊಸ ಸದಸ್ಯ ನಿಲುವಳಿ ಸೂಚನೆಗೆ ಯಾವಾಗ ಉತ್ತರ ಬರುವುದು ಸ್ವಾಭಾವಿಕವಾಗಿ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ ನಂತರ ಉತ್ತರ ಬರಬೇಕು. ಆದರೆ ಆಗ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ತಾವೇ ಮುಖ್ಯಮಂತ್ರಿಗಳು ಬಂದ ತಕ್ಷಣ ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದೀರಿ. ನಾವು ನಿನ್ನೆಯಿಂದ ಕೇಳುತ್ತಿದ್ದೇವೆ. ಬರಲಿಲ್ಲ, ಬೇರೆ ಬೇರೆ ವಿಚಾರಗಳು ಬರುತ್ತಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಇದಾದ ಮೇಲೂ ಸಹ ತಾವು ಯಾವಾಗ ಉತ್ತರ ಕೊಡಿಸುತ್ತಿರೋ ಆಗ ನಾವು ಕೇಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ :- ಮಾನ್ಯ ಯಡಿಯೂರಪ್ಪನವರು ನಿನ್ನೆ ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ನಾವು ಸಹ ಸದನದಲ್ಲಿ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಏನೂ ಇಂಟಿರಿಯಮ್ ರಿಪೋರ್ಟ್ ಬಂದಿದೆ ಅದರ ಬಗ್ಗೆ ಈ ಸದನಕ್ಕೆ ಬೆಳಕನ್ನು ಚೆಲ್ಲಬೇಕು ಅಂತ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಹೇಳಿದ್ದಾರೆ.

ಶ್ರೀ ಎ.ಕೆ. ಅನಂತ ಕೃಷ್ಣ :- ನಾವು ಕೇಳಬೇಕೆಂದು ಅಂದುಕೊಂಡಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ :- ಇವತ್ತು ಸಹ ನಾನು ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಪ್ರಸ್ತಾಪ ಮಾಡಿದ್ದೇನೆ. ನಿಮಗೆ ಏನು ಸಿಓಡಿ ರಿಪೋಟ್ ಬಂದಿದೆ. ಸಿಓಡಿ ರಿಪೋರ್ಟ್ ಬಂದಿದ್ದರೆ ಇವತ್ತಿನವರೆಗೂ ಏನೇನೂ ಆ್ಯಕ್ಷನ್ ತೆಗೆದುಕೊಂಡಿದ್ದಾರೆ, ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಯಾರನ್ನು ನೀವು ಸಸ್ಪೆಂಡ್ ಮಾಡಿದ್ದೀರಿ. ಏನು ಮಾಡಿದ್ದೀರಿ? ಎನ್ನುವುದನ್ನಾದರೂ ಹೇಳಬೇಕಾಗುತ್ತದೆ. ಅವಶ್ಯಕತೆ ಬಿದ್ದರೆ ಇಡೀ ಹೌಸಿಂಗ್ ಬಗ್ಗೆಯೂ ನೀವು ತನಿಖೆ ಮಾಡಬೇಕಾಗುತ್ತದೆ. ತಾವು ಸಹ ಮಾನ್ಯ ಮುಖ್ಯಮಂತ್ರಿಗಳು ಬಂದ ನಂತರ ಮಾಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರ ಬಗ್ಗೆ ನಾನು ಹೇಳುವುದಿಲ್ಲ. ವಿರೋಧ ಪಕ್ಷದಲ್ಲಿ ಕೆಲವು ಸದಸ್ಯರು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಸಹಾಯ ಮಾಡಲಿಕ್ಕೆ ಹೋಗಿದ್ದೀರಿ ಅಂತ ಹೇಳಿದರು. ಅದು ಸರಿಯೋ ಇಲ್ಲವೋ? ಹೇಳುವುದಾದರೆ ಸ್ಪೆಸಿಫಿಕ್ಕಾಗಿ ಹೇಳಿ. ಹೀಗೆ ಕೆಲವು ವಿರೋಧ ಪಕ್ಷದ ಸದಸ್ಯರು ಅಂತ ಹೇಳಬೇಡಿ. ನಿಮ್ಮ ಪಕ್ಷದವರು ಇದ್ದಾರೆ, ನಮ್ಮ ಪಕ್ಷದವರು ಮತ್ತೊಬ್ಬರು ಬರಬಹುದು. ಈ ರೀತಿಯ ಆಪಾದನೆಯನ್ನು ಮಾಡಿದರೆ ನಾವು ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ನಮಗೆ ಪಾವಿತ್ರ್ಯತೆ ಏನು ಉಳಿಯುತ್ತದೆ? ನಮ್ಮದೇನು ಗೌರವ ಉಳಿಯುತ್ತದೆ? ನಿಮ್ಮ ಕಡೆ ಪುರಾವೆ ಇದ್ದರೆ ಕೊಡಿ. ವಿರೋಧ ಪಕ್ಷದವರು ಸಿಓಡಿ ಎನ್‌ಕ್ವಯರಿಯನ್ನು ಸ್ಟಾರ್ಟ್ ಮಾಡುವುದಕ್ಕೆ ಕಾಗೋಡು ತಿಮ್ಮಪ್ಪನವರಿಗೆ ಸಹಾಯ ಮಾಡಲಿಕ್ಕೆ ಅಥವಾ ಯಾರಿಗಾದರೂ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುವುದಕ್ಕೆ ನಿಮ್ಮ ಕಡೆ ಕಾಗದ ಪತ್ರ ಇದ್ದರೆ ಸದನದ ಮುಂದೆ ಇಡಿ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ ಸಿದ್ಧ. ಆದರೆ ಸುಮ್ಮನೆ ಪಬ್ಲಿಸಿಟಿ ಬರಬೇಕು ಅಂತ ಹೇಳಿ. ಏನೋ ಪಬ್ಲಿಸಿಟಿ ಬಂತು ಜನತಾದಳದ ಮೇಲೆ ಆರೋಪವಾಗಬೇಕು. ಎಸ್‌ಜೆಪಿ ಪಕ್ಷದ ಮೇಲೆ ಆರೋಪವಾಗಬೇಕು ಎಂದು ಈ ರೀತಿಯಾಗಿ ಆಪಾದನೆ ಮಾಡುತ್ತಿದ್ದಾರೆ. ನಿಮಗೆ ಇದು ಸಾಧ್ಯವಾಗುವುದಿಲ್ಲ. You will not be able to reach your goal. ಸಿಓಡಿ ಎನ್‌ಕ್ವಯರಿ ಮಾಡಿದ್ದುದು. Because of us. ನಾವು ಹೇಳಿದ್ದು ಆಶ್ರಯದ ದುರ್ವವ್ಯವಹಾರ ಆಯಿತು. ಅದನ್ನು ನಾವೇ ರೈಸ್ ಮಾಡಿ ಇವತ್ತು ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಆ ಕ್ರೆಡಿಟ್ ನಮಗೆ ಬರಬೇಕಾಗುತ್ತದೆ. ಆದರೆ ನಮ್ಮ ಸದಸ್ಯರ ಮೇಲೆ ಆಪಾದನೆಯನ್ನು ಮಾಡಿ ನೀವು ಕ್ರೆಡಿಟನ್ನು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಇದರಿಂದ ನಿಮಗೆ ಲಾಭ ಆಗುವುದಿಲ್ಲ. ತಾವೇನು ಹೇಳಿದ್ದೀರಿ ಅದಕ್ಕೆ ನಮ್ಮ ಸಹಮತ ಇದೆ. ಅದರ ಬಗ್ಗೆ ನಮ್ಮದು ಏನು ಭಿನ್ನಾಭಿಪ್ರಾಯ ಇಲ್ಲ. ನಾನು ಪುನಃ ನಿಮ್ಮ ಮುಂದೆ ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು. ಸತ್ಯ ಪರಿಸ್ಥಿತಿ ಏನು ಎಂಬುದನ್ನು ಹೇಳಬೇಕು. ಏಕೆ ಎಂದರೆ ಅವರು ಇದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಿದರೆ ಅವರ ಮೇಲೆ ನಾವು ಅಪವಾದವನ್ನು ಮಾಡಬೇಕಾಗುತ್ತದೆ. I will accuse him also, if he tries to shield. I am confident he will not. ಇಲ್ಲದಿದ್ದರೆ ಸಿಓಡಿ ಎನ್‌ಕ್ವಯರಿ ಮಾಡುತ್ತಿದ್ದರು. Who ever he may be; ಎಷ್ಟೇ ದೊಡ್ಡವರೇ ಇರಲಿ, ಸಣ್ಣವರೇ ಇರಲಿ who ever is the culprit ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಶ್ರೀ ಜಾಲಪ್ಪನವರು ಏನು ಮಾತನಾಡುತ್ತಿದ್ದರು ಎಂದರೆ ನಮ್ಮ ಜಸ್ಟೀಸ್ Chinnappa Reddy Commission Report ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಜೂನ್ ಒಳಗೆ Impliment ಮಾಡುತ್ತೇವೆಂದು ಹೇಳಿದ್ದರು. ಇದರ ಬಗ್ಗೆ ಪ್ರಿವಿಲೈಜ್ ಮೂವ್ ಮಾಡುವುದಕ್ಕೆ ಪ್ರಯತ್ನ ಮಾಡಿದರೇ ವಿನಹ he did not try to stop what Mr. Yediyurappa raised, ಶ್ರೀ ಯಡಿಯೂರಪ್ಪನವರು ಹೇಳಿದ್ದು ಸರಿಯಲ್ಲ ದಯಮಾಡಿ ತಾವು ಸಮಾಧಾನದಿಂದ ವಿಚಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಶಿವಾನಂದ ಹೆಚ್ ಕೌಜಲಗಿ :- ಮಾನ್ಯ ಅಧ್ಯಕ್ಷರೆ, ಒಬ್ಬರ ಮೇಲೆ ಮತ್ತೊಬ್ಬ ಸದಸ್ಯರು ಏನು ಆಪಾದನೆ ಮಾಡಿದ್ದಾರೆ, ಅದು ಸರಿಯಲ್ಲ ಅದರಿಂದ ವಿರೋಧ ಪಕ್ಷದ ಸ್ಥೈರಣೆಯಾಗುವುದಿಲ್ಲ. ಆದ ಕಾರಣ ಅದನ್ನು ಕಡತದಿಂದ ತೆಗೆಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನಾನು ನನ್ನ ಮಾತಿಗೆ ನಿಷ್ಟನಾಗಿದ್ದೇನೆ. ನಾನು ಏನು ಹೇಳುತ್ತೇನೆ ಎಂದರೆ ಉದ್ದೇಶಪೂರ್ವಕವಾಗಿ ಈ ಆಶ್ರಯ ಯೋಜನೆಯಲ್ಲಿ ನಡೆದಂತಹ ಅವ್ಯವಹಾರದ ಬಗ್ಗೆ ಬೆಳಕಿಗೆ ತರುವಂತಹ ಪ್ರಯತ್ನ ಮಾಡಿದಾಗ ಈ ಕಡೆಯಲ್ಲಿರತಕ್ಕಂತ ಕೆಲವು ವಿರೋಧ ಪಕ್ಷದ ಸದಸ್ಯರುಗಳು ಅವರನ್ನು ರಕ್ಷಣೆ ಮಾಡತಕ್ಕಂತಹ ದೃಷ್ಟಿಯಿಂದ ವಿಷಯವನ್ನು ಬೇರೆ ಕಡೆಗೆ ಎಳೆದುಕೊಂಡು ಹೋಗುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಎಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ :- ಅಧ್ಯಕ್ಷರೇ, either he should prove it or he should apolize or you should pull him and warn him otherwise wrong things will go. ಅವರು ತಪ್ಪಾಯಿತೆಂದು ಹೇಳಲಿ ಅವರು ಈ ಎರಡು ಕೆಲಸ ಮಾಡಲಿಲ್ಲ ಎಂದರೆ ತಾವು ವಾರ್ನ್ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಆ ಮಾತಿಗೆ ಬದ್ಧನಾಗಿದ್ದೇನೆ. ಅದು ಏನಾದರೂ ಕಾನೂನಿನ ಚೌಕಟ್ಟಿನೊಳಗೆ ಸರಿಯಲ್ಲವೆಂದರೆ ತೆಗೆಸಿ ಹಾಕಿ ಆದರೆ ನಮಗೆ ಈ ರೀತಿ ಆರೋಪ ಮಾಡುವಂತಹ ಅಧಿಕಾರವಿದೆ. ನೇರವಾಗಿ ಆರೋಪ ಮಾಡುತ್ತಿದ್ದೇನೆ. ಅದಕ್ಕೆ ಉದಾಹರಣೆ ಬೇಕೆಂದರೆ ಬೇರೆ ಸಂದರ್ಭದಲ್ಲಿ ಕೊಡುತ್ತೇನೆ. ನಾನು ಯಾವುದೇ ವ್ಯಕ್ತಿಯ ಹೆಸರನ್ನು ಹೇಳಲಿಲ್ಲ ನಿರ್ಧಿಷ್ಟವಾಗಿ ನಾನು ಯಾರ ಹೆಸರನ್ನು ಹೇಳಲಿಲ್ಲ. ನನಗೆ ಅನ್ನಿಸಿದ ಮಾತನ್ನು ಹೇಳಿದ್ದೇನೆ. ಆದರೆ ಅದು ನಿಮಗೆ ತಪ್ಪು ಎನಿಸಿದರೆ ತೆಗೆಸಿಹಾಕಿ.

ಶ್ರೀ ಆರ್.ವಿ. ದೇಶಪಾಂಡೆ :- ತಾವು ನಿರ್ಧಿಷ್ಟವಾಗಿ ಹೇಳಿ ಅವರೇ, ಇವರೇ ನಾವೇ ಯಾರು ಎಂಬುದನ್ನು ಬಯಲು ಮಾಡಿ.

(ಗೊಂದಲ)

ಶ್ರೀ.ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ನಾವೆಲ್ಲಾ ಒಂದು ಗೌರವವನ್ನು ಇಟ್ಟುಕೊಂಡು ಬಂದಿದ್ದೇವೆ. ಈಗ ಮಾನ್ಯ ಯಡಿಯೂರಪ್ಪನವರು ಈ ರೀತಿಯಾಗಿ ಮಾಡುತ್ತಿರುವುದು ಆರನೇಯ ಬಾರಿ. ಅವರು ಮುಂದೆ ಅಧಿಕಾರಕ್ಕೆ ಬರುತ್ತೇವೆ ಎಂಬ ವಿಚಾರವನ್ನು ಇಟ್ಟುಕೊಂಡಿದ್ದಾರೆ. ಅವರ ಬಗ್ಗೆ ನಮ್ಮದು ಯಾರದು ತಕರಾರು ಇಲ್ಲ. ಪ್ರಜಾಪ್ರಭುತ್ವ ತಂತ್ರದಲ್ಲಿ ಅವರಿಗೆ ಆ ಸ್ಥಾನಸಿಗುವುದಾದಲ್ಲಿ ನಮ್ಮದೇನು ಆಕ್ಷೇಪ ಇಲ್ಲ. ನಾವು ಅನೇಕ ಬಾರಿ ಹೇಳಿದ್ದೇವೆ, ನಿಮ್ಮನ್ನು ಮಾನ್ಯ ಮುಖ್ಯಮಂತ್ರಿಗಳೇ, ಮುಖ್ಯಮಂತ್ರಿಗಳೇ, ಸಭಾನಾಯಕರೇ ಎಂದು ಕರೆಯುತ್ತೇವೆ ಎಂದು. ನಾವೇ ಮಾಡಿಕೊಂಡಿರುವಂತಹ ನಿಯಮಾವಳಿಗಳ ಪ್ರಕಾರ ಅವರಿಗೆ ಒಂದು ನೋಟೀಸ್ ಕೊಡಬೇಕಾಗುತ್ತದೆ. ಅವರಿಗೆ ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ನೀವು ಈ ರೀತಿ ಅವರಿಗೆ ಉತ್ತರ ಕೊಡುವುದಕ್ಕೆ ಒಂದು ಅವಕಾಶ ಸಿಕ್ಕುತ್ತದೆ. ಇವತ್ತಿನ ಜವಾಬ್ದಾರಿಯತ "ಪ್ರಜಾವಾಣಿ ಪತ್ರಿಕೆಯಲ್ಲಿ" ಮುಖಪುಟದಲ್ಲಿ ವಿಧಾನಸಭಾ ಕಾರ್ಯಕಲಾಪಗಳ ಬಗ್ಗೆ ವರದಿಯನ್ನು ಬರೆಯುವಂತಹ ಸಂದರ್ಭದಲ್ಲಿ ಬಹಳ ಚೆನ್ನಾಗಿ ಬರೆದಿದ್ದಾರೆ. ಮೊದಲ ಬಾರಿ ಕರ್ನಾಟಕ ವಿಧಾಸಭೆಯಲ್ಲಿ ಈ ಮಟ್ಟದಲ್ಲಿ ಪರಸ್ಪರ ಶಾಸಕರು ಒಬ್ಬರ ಮೇಲೆ ಒಬ್ಬರು ದೋಷಾರೋಪಣೆ ಮಾಡಿಕೊಳ್ಳುವಂತಹ ಘಟನೆ ಏನು ಇದೆ ಇದು ನಿಜಕ್ಕೂ ಸಹ ವಿಧಾನಸಭೆಯ ಮಟ್ಟವನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿದೆ ಎಂದು ಹೇಳತಕ್ಕಂಥ ವಿಚಾರಗಳಿಗೆ ಸಾರ್ವಜನಿಕರಲ್ಲಿ ಬೆಲೆ ಇರುತ್ತದೆಯೇ, ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಈಗ ಕಾಗೋಡು ತಿಮ್ಮಪ್ಪನವರ ವಿಚಾರದಲ್ಲಿ ತಮಗೆ ಗೊತ್ತಿರುವ ಹಾಗೆ ಚಿನ್ನಪ್ಪ ರೆಡ್ಡಿ ಆಯೋಗ ವರದಿಯ ಬಗ್ಗೆ ಒಂದು ಹಕ್ಕು ಚ್ಯುತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಬಗ್ಗೆ ತರಬೇಕು ಎನ್ನತಕ್ಕಂಥ ಒಂದು ವಿಚಾರವನ್ನು ಶ್ರೀ ಜಾಲಪ್ಪನವರು ತಮ್ಮ ಜೊತೆಯಲ್ಲಿ ಪ್ರಸ್ತಾಪಿಸಿದ್ದಾರೆ. ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಇಲ್ಲಿ ಮತ್ತೊಂದು ಏನಾಗಿದೆ ಎಂದರೆ

ನಾವು ಇಲ್ಲಿ ಐದಾರು ಜನರು ಮಾತನಾಡಿ ತಮ್ಮ ಗಮನವನ್ನು ಸೆಳೆಯವುದು ಸುಲಭ, ಏಕೆ? ನಾವು ನಮ್ಮ ನಮ್ಮ ಪಕ್ಷಗಳ ನಾಯಕರುಗಳು ಎನಿಸಿಕೊಂಡಿದ್ದೇವೆ. ಆದರೆ ಹಿಂದೆ ಕುಳಿತಿರುವವರಿಗೆ ಕಷ್ಟವಾಗುತ್ತದೆ.

ಈಗ ಮಾನ್ಯ ಜಾಲಪ್ಪನವರ ಆ ದೃಷ್ಟಿಯಿಂದಾಗಿ ಒಂದೆರಡು ಸಾರಿ ಪ್ರಯತ್ನವನ್ನು ಮಾಡಿದರು. ನಿಮ್ಮ ಗಮನವನ್ನು ಸಹ ಸೆಳೆದಿದ್ದಾರೆ. ಈಗ ಲಾಕಪ್ ಡೆತ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಆದಾದ ನಂತರ ನಾವೇ ಕೇಳುತ್ತಿದ್ದೇವೆ ಮತ್ತು ನಿಮಗೂ ಹೇಳಿದ್ದೇವೆ. ನಮಗೆ ಯಾವ ರೀತಿಯಲ್ಲೂ ಕೂಡ ಯಾರನ್ನು ಸಹ ಶೀಲ್ಡ್ ಮಾಡಬೇಕು ಎನ್ನುವಂತಹ ಪ್ರಶ್ನೆ ಬರುವುದಿಲ್ಲ. ಶೀಲ್ಡ್ ಮಾಡುವುದಕ್ಕೆ ಆಗುವುದಿಲ್ಲ. ಇದು ಏನಾಗುತ್ತದೆಯೆಂದರೆ ಮಾನ್ಯ ಅಧ್ಯಕ್ಷರೇ, ಜನಗಳು ಇದಕ್ಕೆಲ್ಲಾ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ನಾವು ಹೇಳತಕ್ಕಂತಹ ಆಪಾದನೆಗಳಿಗೂ,, ನಾವು ಮಾಡತಕ್ಕಂಥ ಕೃತಿಗೂ, ನಮ್ಮ ಮಾತಿಗೂ ಇರತಕ್ಕಂತಹ ವ್ಯತ್ಯಾಸ ಇವೆಲ್ಲವುಗಳಿಗೂ ಸಹ ಜನ ನಮಗೆ ತೀರ್ಮಾನ ಕೊಡುತ್ತಾರೆ. ವಿರೋಧ ಪಕ್ಷಗಳಲ್ಲಿ ಇರತಕ್ಕಂತಹ ನಮ್ಮಗಳ ಕಡೆ ಒಬ್ಬರು ಇಬ್ಬರು ಎರಡು ಬೆರಳು ಮಾಡಿ ತೋರಿಸಿದಾಗ ನಮ್ಮ ಕ್ಷೇತ್ರಗಳಲ್ಲಿ ನಮ್ಮ ಗೌರವ ಏನು ಇರುತ್ತದೆ ಎಂದು ತಾವು ವಿಚಾರ ಮಾಡಿ. ತಮಗೆ ಮಾತನಾಡುವುದಕ್ಕೆ ಹಕ್ಕಿದೆ, ನನಗೆ ಗೊತ್ತಿದೆ ಎಂದು ನೀವು ಹೇಳುವುದಾದರೆ, ಗೊತ್ತಿದ್ದರೆ ಯಾರು ಎಂದು ಹೇಳಿ. ಸಿಂಧ್ಯರವರು ಆಶ್ರಯದಲ್ಲಿ ಎಷ್ಟು ಕೋಟಿ ರೂಪಾಯಿಯನ್ನು ಕಾಗೋಡು ತಿಮ್ಮಪ್ಪನವರ ಮೂಲಕ ತೆಗೆದುಕೊಂಡಿದ್ದಾರೆ. ದೇಶಪಾಂಡೆಯವರು ತೆಗೆದುಕೊಂಡಿದ್ದಾರೆ. ವಾಟಾಳ್ ನಾಗರಾಜ್ ತೆಗೆದುಕೊಂಡಿದ್ದಾರೆ. ಪ್ರೊ. ನಂಜುಂಡಸ್ವಾಮಿಯವರು ತೆಗೆದುಕೊಂಡಿದ್ದಾರೆ ಎಂದು ಹೇಳಿ ನೀವು ಅದು ಬಿಟ್ಟು ನೀವು ಸುಮ್ಮನೆ ಅದು ನನ್ನ ಅಭಿಪ್ರಾಯ ಎಂದು ಹೇಳಿ ಅದು ರೆಕಾರ್ಡ್‌ಗೆ ಹೋಗಬೇಕು ಎಂದು ಹೇಳಿದಾಗ What does it reflect? ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಸಾರ್ವಜನಿಕರ ಜೊತೆ ಹೇಗೆ ಕೆಲಸ ಮಾಡುವುದು ? ನಾವು ಇಲ್ಲಿ ಶಾಸಕರಾಗಿದ್ದೇವೆ ಎನ್ನುವುದರ ಜೊತೆಗೆ ನಮ್ಮ ನಮ್ಮ ಕುಟುಂಬದಲ್ಲಿ, ನಮ್ಮ ಸಮಾಜದಲ್ಲಿ ನಮ್ಮ ರಾಜ್ಯದಲ್ಲಿ, ನಮ್ಮ ನಾಡಿನಲ್ಲಿ ನಾವು ಸಹ ಏನೋ ಅಲ್ಪ ಸ್ವಲ್ಪ ಕೆಲಸ ಮಾಡಿ ಒಂದು ವರ್ಗದ ಜನಗಳಿಗೆ ಸಹಾಯ ಮಾಡಿ ಬಂದಿರತಕ್ಕಂಥಹವರು. ನಾವು ಇಲ್ಲಿ ವಿಧಾನಸಭೆಗೆ ಬರುತ್ತೇವೆ ಸದಸ್ಯರಾಗಿದ್ದೇವೆ ಎನ್ನುವಂಥಹ ಕಾರಣಕ್ಕೆ ನಾವು ನಮ್ಮ ಮಾನಮರ್ಯಾದೆ ಹರಾಜು ಮಾಡಿಕೊಳ್ಳುವುದಕ್ಕೆ ತಯಾರಾಗಿಲ್ಲ. ಸ್ವಾಮಿ, ನೀವು ಅಧಿಕಾರಕ್ಕೆ ಬನ್ನಿ, ಆದರೆ ನಮ್ಮ ಶವಗಳ ಮೇಲೆ ನೀವು ಅಧಿಕಾರದ ತಾಂಡವೀ ನೃತ್ಯವನ್ನು ಆಡಬೇಕು ಎಂದರೆ ಅದಕ್ಕೆ ಜನ ಒಪ್ಪುವುದಿಲ್ಲ. ನೀವು ತಪ್ಪು ತಿಳಿದುಕೊಂಡಿದ್ದೀರಿ. ಈಗ ನಿಮಗೇನಾಗಿದೆ ಎಂದರೆ ಕಾಂಗ್ರೆಸ್ಸಿಗಿಂತ ಹೆಚ್ಚಾಗಿ ಜನತಾದಳ ಮುಗಿದು ಹೋಗಿ ಬಿಡಬೇಕು. ಅದೆಲ್ಲಾ ನಮಗೆ ಗೊತ್ತು ನಮಗೆ ಏನೂ ಗೊತ್ತಿಲ್ಲ ಎಂದು ತಿಳಿದುಕೊಳ್ಳಬೇಡಿ. ನಿಮಗೆ ಭಯ ಹುಟ್ಟಿ ಬಿಟ್ಟಿದೆ. ಎಸ್. ಜೆ. ಪಿ. ಜನತಾದಳ ಜೂನ್ 15ನೇ ತಾರೀಖಿನ ಒಳಗಡೆ ಒಂದಾಗುತ್ತಿದ್ದಾರೆ ಎಂದು ಮಾನ್ಯ ಎಸ್. ನಿಜಲಿಂಗಪ್ಪನವರು ಒಂದು ಆಲ್ಟರ್‌ನೇಟಿವ್ ಥರ್ಡ್ ಫೋರ್ಸ್ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಇದುವರೆಗೂ ನೀವು ಸನ್ಮಾನ್ಯ ಗೌರವಾನ್ವಿತ ನಿಜಲಿಂಗಪ್ಪನವರು ಎಂದು ಹೇಳುತ್ತಿದ್ದವರು ಈಗ ನಿಮ್ಮ ಧ್ವನಿ ಏನಾಗಿದೆ ಎನ್ನುವುದು ನಮಗೆಲ್ಲಾ ಗೊತ್ತಿದೆ. ಸೆಕ್ಯುಲರ್ ಫೋರ್ಸ್‌ಗೆ ಈ ದೇಶದಲ್ಲಿ ಡೆಮಾಕ್ರಟಿಕ್ ಫೋರ್ಸ್ಸ್ ಸೋಷಿಯಲಿಸ್ಟ್ ಫೋರ್ಸ್ಸ್, ಅಂತಿಮವಾಗಿ ಉಳಿಯತಕ್ಕಂಥಾದ್ದು. ಮಾನ್ಯ ಅಧ್ಯಕ್ಷರೇ, ಕೊನೆಯಲ್ಲಿ ನಾನು ಏನು ಹೇಳುತ್ತಿದ್ದೇನೆಂದರೆ, ನಮ್ಮ ಬಗ್ಗೆ ಮತ್ತು ನಮ್ಮ ಕ್ಯಾರೆಕ್ಟರ್ ಅಸಾಸಿನೇಷನ್ ಮಾಡತಕ್ಕಂತಹ ಪ್ರಯತ್ನವನ್ನು ಮಾನ್ಯ ಯಡಿಯೂರಪ್ಪನವರು ಏನು ಮಾಡುತ್ತಿದ್ದಾರೆ ಅದಕ್ಕೆ ಮಾತ್ರ ನಾವು ಅವಕಾಶವನ್ನು ಯಾವುದೇ ಕಾರಣಕ್ಕೂ ಸಹ ಕೊಡುವುದಿಲ್ಲ. ನಮ್ಮ ಪಕ್ಷದಲ್ಲಿ ಇರತಕ್ಕಂಥ ಆಂತರಿಕ ಒಡಕುಗಳನ್ನು ನೀವು ದುರುಪಯೋಗ ಮಾಡಿಕೊಂಡು ಈ ರೀತಿ ಆಡುತ್ತಿರುವುದು ಸರಿಯಲ್ಲ. ನಾವು ಡೆಮಾಕ್ರಾಟ್ಸ್ ರೀ, ನಮ್ಮಲ್ಲಿ ಭಿನ್ನಾಭಿಪ್ರಾಯದ ಇದೆ ನಿಮ್ಮ ಹಾಗೆ ನಾವು ಎಲ್ಲೋ ಒಂದು ಕಡೆಯಿಂದ ಸಿಗ್ನಲ್ ತೆಗೆದುಕೊಂಡು ಬರುವುದಿಲ್ಲ. ಹೌದು, ಅನೇಕ ವಿಚಾರಗಳಲ್ಲಿ ನಮ್ಮಲ್ಲಿ ಇರತಕ್ಕಂಥಹ ಅನೇಕ ಸಹೋದ್ಯೋಗಿಗಳ ಜೊತೆಯಲ್ಲಿ ಭಿನ್ನಾಭಿಪ್ರಾಯವಿದೆ. That is the essence of democracy.

ಹೌದು, ನೀವೆಲ್ಲಾ ಸನ್ಯಾಸಿಗಳು, ನಿಮಗೆ ಅಧಿಕಾರ ಬೇಕಾಗಿಲ್ಲ. ನೀವು ರಾಮನ ಹೆಸರನ್ನು ದೇಶದಲ್ಲಿ ಹೇಳಿಕೊಂಡು ರಾಮರಾಜ್ಯ ಮಾಡುವುದಕ್ಕೆ ಹೋಗುತ್ತಿದ್ದೀರಿ. ನಿಮಗೆ ಅಧಿಕಾರ ಏಕೆ ಬೇಕಾಗಿದೆ? ಆ ಅಧಿಕಾರವನ್ನು ನಮಗೆ ಕೊಟ್ಟುಬಿಡುತ್ತೀರಾ? ನೀವೆಲ್ಲಾ ಮಂತ್ರಿಗಳೇ ಆಗುವುದಿಲ್ಲವಾ? ಇದೆಲ್ಲಾ ಹುಚ್ಚುತನದ ಪರಮಾವಧಿ ಮಾನ್ಯ ಅಧ್ಯಕ್ಷರೇ ನಾವು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇವೆ, ಯಾವುದೇ ಕಾರಣಕ್ಕೂ ಸಹ ನಮ್ಮ ಕ್ಯಾರೆಕ್ಟರ್ಸ್ ಬಗ್ಗೆ ಮಾತನಾಡಲು. it cannot be allowed ಆದುದರಿಂದ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅಥವಾ ವ್ಯಯಕ್ತಿಕವಾಗಿ ಹೇಳಬೇಕು ಎಂದರೆ ನೀವು ಚಾರ್ಜಸ್ ಬರೆದುಕೊಡಿ, ನಿರ್ದಿಷ್ಟವಾಗಿ ಚಾರ್ಜ್ ಮಾಡಿ, ಇಂತಹ ಸದಸ್ಯರು ಹೀಗೆ ಮಾಡಿದ್ದಾರೆ ಎಂದು. Let us have a proof.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಏಕೆ ಹೇಳಲಿ, ಇಲ್ಲೇ ನಿಮ್ಮ ಜೀವರಾಜ್ ಆಳ್ವರವರೇ ನಿಂತುಕೊಂಡು ನಿಮ್ಮ ನಿಮ್ಮ ಸದಸ್ಯರುಗಳ ಬಗ್ಗೆ ಏನೇನು ಹೇಳಿದ್ದಾರೆ ಎಂದು ನಿಮಗೇ ಗೊತ್ತು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಅದು ಬೇರೆ ವಿಚಾರ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಆ ಕೆಲಸ ಮಾಡುವುದಕ್ಕೆ ಸಿದ್ಧವಿಲ್ಲ. ನಾನು ಆ ಮಟ್ಟಕ್ಕೆ ಇಳಿಯುವುದಕ್ಕೆ ಸಿದ್ಧನಿಲ್ಲ. ನೀವು ಬೇಕಾದ್ದು ಮಾಡಿಕೊಳ್ಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :-ಆದರೆ ನೀವು ವಿಷಾಯಾಂತರ ಮಾಡುವುದರಲ್ಲಿ ಬಹಳ ಬುದ್ಧಿವಂತರು ಇದ್ದೀರಿ, ಮಾತಿನಲ್ಲಿ ಬಹಳ ಚತುರರಿದ್ದೀರಿ. ನಾನು ಏನು ವಿನಂತಿ ಮಾಡುತ್ತಿದ್ದೇನೆ ಎಂದರೆ ನಾನು ಸಿಂಧ್ಯಾರವರ ಮಾತನ್ನು ಒಪ್ಪಿಕೊಳ್ಳುತ್ತೇನೆ ಯಾವುದೇ ಕಾರಣಕ್ಕೂ ಆರೋಪ ......,

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :- ನೋಡಿ ಸ್ವಾಮಿ ನಾನು ಮಾತನಾಡಬೇಕಾದರೆ ಅವರು ಹೇಗೆ ಅಡ್ಡಿ ಮಾಡಿ ಮಾತನಾಡುತ್ತಾರೆ, ನನಗೆ ಅಧಿಕಾರ ಇಲ್ಲವೇನು ಎರಡು ನಿಮಿಷ ಮಾತನಾಡುವುದಕ್ಕೆ ? ಇವರಿಗೆ ಉರಿ ಹತ್ತಿಕೊಂಡಿದೆ, ಅದಕ್ಕೆ ಕೂಗಿಕೊಳ್ಳುತ್ತಿರುವುದು, ಚೀರುತ್ತಾ ಇರುವುದು, ಇವತ್ತು 20 ಕೋಟಿ ರೂಪಾಯಿ ಲೂಟಿಯಾಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:- ವಿರೋಧ ಪಕ್ಷದ ಬಗ್ಗೆ ಇರುವ ಗೌರವ ಇವತ್ತು ನಿಮ್ಮಿಂದ ಹಾಳಾಗಿ ಹೋಗಿದೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ...............

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ :- ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ಸ್ವಲ್ಪ ಗಮನ ಕೊಡಬೇಕು. ನನ್ನದೊಂದು ಕ್ರಿಯಾರೋಪ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅವರು ಯೀಲ್ಡ್ ಆದಾಗ(ಮಾನ್ಯಸಿಂಧ್ಯರವರು) ನಾನು ಎರಡು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶ ಇಲ್ಲವೇ ?

ಶ್ರೀ ಎ.ಕೆ. ಅನಂತಕೃಷ್ಣ:- ನನ್ನದು ಒಂದು ಕ್ರಿಯಾಲೋಪ ಇದೆ ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಇದು ಸರಿಯೇ? ಯಡಿಯೂರಪ್ಪನವರು ನಿಂತುಕೊಂಡ ತಕ್ಷಣ ಹತ್ತು ಜನ ನಿಂತುಕೊಳ್ಳುವುದು ಇದು ಸರಿಯೇ?

ಶ್ರೀ ಎ.ಕೆ. ಅನಂತಕೃಷ್ಣ :- ನನಗೆ ಎರಡು ನಿಮಿಷ ಅವಕಾಶ ಕೊಡಿ. ಇಲ್ಲದಿದ್ದರೆ ನಾವ್ಯಾರು ಇಲ್ಲಿ ಇರತಕ್ಕಂಥದ್ದೂ ಇಲ್ಲ ಎಂದು ಹೇಳಿಬಿಡಿ. ನಾವು ಹೊರಟು ಹೋಗುತ್ತೇವೆ. ಅವರೇ ಮಾತನಾಡುತ್ತಾ ನಿಂತುಕೊಂಡುಬಿಡಲಿ. ನನ್ನದು ಒಂದು ಕ್ರಿಯಾಲೋಪ ಹೇಳುತ್ತಿದ್ದೇನೆ. ನಾನು ನಿಯಮಾವಳಿ ಬಿಟ್ಟು ಹೋಗುವುದಿಲ್ಲ. ಕ್ರಮ ಬಿಟ್ಟು ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಬಿ.ಜೆ.ಪಿ ಯವರು ಎದ್ದು ನಿಂತ ತಕ್ಷಣ ಹೊಟ್ಟೆ ಉರಿ ಶುರುವಾಗುತ್ತದೆ.

(ಗೊಂದಲ)

ಅಧ್ಯಕ್ಷರು :- ಅವರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಇಲ್ಲಿ ಎಲ್ಲಿದೆ ಕ್ರಿಯಾಲೋಪ ? ಮಾನ್ಯ ಸಿಂಧ್ಯಾವರು ಯಿಲ್ಡ್ ಆಗಿದ್ದಾರೆ. ನಾನು ಮಾತನಾಡುವುದಕ್ಕೆ ನಿಂತಿದ್ದೇನೆ.

(ಗೊಂದಲ)

ಶ್ರೀ ಎ. ಕೆ. ಅನಂತಕೃಷ್ಣ:- ಅಧ್ಯಕ್ಷರೇ, I am on my legs. I must be allowed to submit my Point of Order.

(INTERRPUTION)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಯೀಲ್ಡ್ ಆಗಿಲ್ಲ. ಅವರು (ಮಾನ್ಯ ಸಿಂಧ್ಯಾರವರು) ಯಿಾಲ್ಡ್ ಆಗಿದ್ದಾರೆ. ನನಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು :- ಅವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಾರೆ. ಅದೇನೆಂದು ಕೇಳೋಣ.

ಶ್ರೀ ಎ. ಕೆ. ಅನಂತಕೃಷ್ಣ :- ಅಧ್ಯಕ್ಷರೇ Let me be permitted to submit my Point of Order.

ಅಧ್ಯಕ್ಷರು:- ಹೇಳಿ

ಶ್ರೀ ಎ. ಕೆ. ಅನಂತಕೃಷ್ಣ :- ಯಾವ ಕಾರ್ಯ ಕಲಾಪಕ್ಕೂ ನಾನು ಅಡ್ಡಿ ತರುವುದಕ್ಕೆ ಇಷ್ಟವಿಲ್ಲ. ಆದರೆ ನಮ್ಮೆಲ್ಲರಿಗೂ ಅಡ್ಡಿ ಬರುವ ರೀತಿಯಲ್ಲಿ ನಡುವಳಿಕೆ ನಡೆಯಬೇಕಾಗಿದ್ದರೆ ನಾವು ತಮ್ಮ ಗಮನವನ್ನು ಸೆಳೆಯಬೇಕಾಗಿ ಬರುತ್ತದೆ ಮಾನ್ಯ ಸಿಂಧ್ಯಾರವರು ಬಹಳ ಮುಖ್ಯವಾದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದರು. ಇಲ್ಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಕ್ರಿಯಾಲೋಪ ಏನು ಹೇಳಲಿ.

ಶ್ರೀ ಎ. ಕೆ. ಅನಂತಕೃಷ್ಣ :- ಸ್ವಾಮಿ ಅವರನ್ನು ಕೂಡಿಸಿ. ಇಲ್ಲದಿದ್ದರೆ ಹೊರಗಡೆ ಹಾಕಿ. Either he must be asked to resume his seat or he must be thrown out of the House. He must have the patience to listen to us. ಅವರನ್ನು ಕೂಡಿಸಿ, ನಾನು ಹೇಳಬೇಕು. ನನಗೆ ತಾವು ಅವಕಾಶವನ್ನು ಕೊಡಬೇಕು, ಇಲ್ಲದಿದ್ದರೆ, ನಾವೆಲ್ಲ ಹೊರಗಡೆ ಹೋಗುತ್ತೇನೆ. We are taken for a ransom here .

(ಗೊಂದಲ)

ಅಧ್ಯಕ್ಷರು :- ಮಾನ್ಯ ಅನಂತಕೃಷ್ಣ ಅವರೇ, ಕುಳಿತುಕೊಳ್ಳಿ.

ಶ್ರೀ ಎ.ಕೆ. ಅನಂತಕೃಷ್ಣ :- ನನ್ನನ್ನು ಕುಳಿತುಕೊಳ್ಳಿ ಎಂದು ಹೇಳಿದರೆ ನಾನು ಹೊರಟು ಹೋಗುತ್ತೇನೆ. ನಾನು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರೆ ಅದಕ್ಕೆ ಬೆಲೆ ಇಲ್ಲ ಎಂದು ಹೇಳಿದರೆ ಹೇಗೆ ? If it is only a matter between the Ministers and the Opposition, then you ask all of us to go we are all prepared to go of the House. I am putting it with a great pain in my heart.

ಅಧ್ಯಕ್ಷರು :- ತಮ್ಮ ಪಾಯಿಂಟ್ ಆಫ್ ಆರ್ಡರ್, ಅದನ್ನೇನಾದರೂ ಹೇಳಿ.

ಶ್ರೀ ಎ. ಕೆ. ಅನಂತಕೃಷ್ಣ :- ಅದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು :- ಕೊಟ್ಟಿದ್ದೇನೆ. ತಾವು ಹೇಳುತ್ತಿಲ್ಲ.

Sri. A. K. AnanthaKrishna :- I am substantiating what my hon'ble friend Mr. Sindia has said. I am saying this also with some anxiety and pain. He was very good enough to draw your kind attention to the fact that your attention is drawn to the first few members in the first line. It is with difficulty we are able to catch your eyes. Once we are able to catch your eyes, we would like to be given some opportunity. This is exactly what for I am also standing. Now, I will come to the point. Mr. Sindia was rightly putting it.

ಅಧ್ಯಕ್ಷರು :- ಮಾನ್ಯ ವಾಟಾಳ್ ನಾಗರಾಜ್‌ರವರು ತಮಗೆ ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ :- ಗಂಟೆಗಟ್ಟಲೆ ಅವರಿಗೆ ನಮ್ಮ ಮೇಲೆ ಆಪಾದನೆ ಮಾಡುವುದಕ್ಕೆ ಅವಕಾಶ ಮಾಡುತ್ತೀರಿ.

ಅಧ್ಯಕ್ಷರು :- ಕನ್ನಡದಲ್ಲಿ ಮಾತನಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ :- ನೋಡಿ ಸ್ವಾಮಿ, ನಮಗೆ ಮಾತನಾಡಲು ಅವಕಾಶ ಇಲ್ಲ ಎಂದು ಹೇಳಿದರೆ ನಾನು ಖಂಡಿತಾ ಸಭೆ ಬಿಟ್ಟು ಹೋಗುತ್ತೇನೆ. ತಾವು ತಪ್ಪು ತಿಳಿದುಕೊಳ್ಳಬೇಡಿ. ನಾನು ತಮ್ಮ ಮೇಲೆ ಪ್ರತಿಭಟನೆ ಮಾಡುತ್ತೇನೆ. ಎಂದು ಅಂದುಕೊಳ್ಳಬೇಡಿ. It is painful for us. All the time only they go on talking.

ತಮ್ಮಲ್ಲಿ ನಿಯಮಾವಳಿಗಳು ಇದೆ.

ಶ್ರೀ ಬಿ. ಹೆಚ್. ಬನ್ನಿಕೋಡ್ :- ಕನ್ನಡದಲ್ಲಿ ಸಿಟ್ಟು ಮಾಡಿರಿ ಎಂದು ಹೇಳಿದರು.

ಶ್ರೀ ಎ.ಕೆ. ಅನಂತಕೃಷ್ಣ :- ಅವರು ನಾಲ್ಕು ಜನ ನಿಂತುಕೊಂಡು ಕೂಗಾಡುತ್ತಿರ ಬಹುದೇ? They have no patience to hear us. you have allowed Mr. Sindia for long time. I am also standing here to substantiate exactly what he has said. He has also addressed you with a little pain in his heart. I am also addressing you with a pain in my heart I would also like to have the same opportunity to be heard. I am also drawing your kind attention to the very fact that the Rules are laid by this august House at our instance only.

You cannot be violating it all the time. Whether it is the issue of the Housing Board Chairman or any other matter, it has to be dealt only according to the Rules of the House, and then an opportunity is taken from the Hon'ble Speaker, you have to raise the issue or discuss the issue if it is permitted. Otherwise, if you keep on shouting at it, to attract the attention of the people through the Press or objecting the proceedings of this House, it is not proper at all. On this matter, you may kindly give a ruling because if they go on shouting at it, there is no point at all. I would like to make one more point clear. It is not as though only the members of the opposition are anxious to know what has gone wrong at the level of the members of the ruling party and at the level of the treasury benches. We would also like to know. The people should not get an impression that only the opposition is interested in providing a clean administration. we are also interested in providing clean administration. We are here to back our Government to give a clean administration. We would also like to see that the the matters are set right. Should we not get an opportunity in this matter? If the members of the opposition raise a point that something has gone wrong somewhere at the level of the Minister we would also like to discuss the whole matter. Let it be discussed. But it should not be one-sided. It should not be unilateral. It should not be arbitrary. If they want to raise an issue on the Housing Board Chairman they are welcome to do that. Our Government is not afraid of facing them. Let them raise it according to the rules. Let us have a full fledged and in depth discussion of the matter. Let the whole matter be decided but let them not take the role of a prosecutor, a judge or a hangman.

(ಗೊಂದಲ)

ಅಧ್ಯಕ್ಷರು :- ನಾನು ಮಾನ್ಯ ಜಾಲಪ್ಪನವರನ್ನು ಕರೆದಿದ್ದೇನೆ.

ಪ್ರೊ: ಎಂ. ಡಿ. ನಂಜುಂಡಸ್ವಾಮಿ :- ಮಾನ್ಯ ಅನಂತಕೃಷ್ಣ ಅವರು ಹೇಳಿದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಒಂದು ವಿಷಯ ಇದೆ.

ಶ್ರೀ ಕೆ. ಎಸ್. ಕಾಳಮರಿಗೌಡ :- ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಏನೆಂದರೆ, ಈಗ ಸರ್ಕಾರ ಗೃಹ ಮಂಡಳಿಯ ಮೇಲೆ ಸಿಓಡಿ ತನಿಖೆಗೆ ಒಪ್ಪಿಸಿದೆ, ಅದು ಆಗುತ್ತಿದೆ. ಸಿಓಡಿ ಆಗುವ ತನಕ ನಾವು ಅದನ್ನು

ಕಾಯಬೇಕಾಗಿದೆ. ಮಾನ್ಯ ಯಡಿಯೂರಪ್ಪನವರು ಇಂಟೀರಿಯಮ್ ರಿಪೋರ್ಟ್ ಏನು ಬಂದಿದೆಯೋ ಅದನ್ನು ಸದನದೊಳಗೆ ಇಡಬೇಕು ಎನ್ನತಕ್ಕದ್ದನ್ನು ಹೇಳಿದ್ದಾರೆ. ಅದು ಒಂದು ಮಾತು ಇರಲಿ. ಈಗ ಭಾರತೀಯ ಜನತಾ ಪಕ್ಷದವರು ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುತ್ತೇವೆ ಎಂದು ದುಡ್ಡು ವಸೂಲಿ ಮಾಡಿದರು ದುಡ್ಡು ಕಲೆಕ್ಷನ್ ಮಾಡಿದರು. ಇವರು ಯಾರಿಗೆ ಅಕೌಂಟ್ ಕೊಟ್ಟಿದ್ದಾರೆಂದು ಹೇಳಲಿ ? ಜನರಿಗೆ ಅಕೌಂಟ್ ಕೊಟ್ಟಿದ್ದಾರೋ? ಜನರಿಗೆ ಅಕೌಂಟ್ ಕೊಡಬೇಕಾಗಿದೆ.

(ಗೊಂದಲ)

ಶ್ರೀ ಕೆ. ಎಸ್. ಕಾಳ ಮರಿಗೌಡ :- ಒಬ್ಬರಿಗೊಬ್ಬರು ಚಾರಿತ್ರ್ಯ ವಧೆ ಮಾಡುವುದಕ್ಕೆ ಹೊರಟಿದ್ದಾರೆ. ವಾಟಾಳ್ ನಾಗರಾಜ್ ಕಾಗೋಡು ತಿಮ್ಮಪ್ಪನವರನ್ನು ಹಿಡಿದುಕೊಳ್ಳುತ್ತಾರೆ. ಮಾನ್ಯ ನಂಜುಂಡಸ್ವಾಮಿಯವರು ಪುಟ್ಟಸ್ವಾಮಿ ಗೌಡರನ್ನು ಹಿಡಿದುಕೊಂಡು ಅಲ್ಲಾಡಿಸುತ್ತಿದ್ದಾರೆ. ವೈಯಕ್ತಿಕವಾಗಿ ಚಾರಿತ್ರ್ಯ ಹರಣ ಮಾಡುವುದಕ್ಕೆ ಹೊರಟಿದ್ದಾರೆ. ಇವರು ಶಿಕಾರಿಪುರದಲ್ಲಿ ಗಂಧದ ಮರವನ್ನು ಲೂಟಿ ಮಾಡಿದ್ದರೆ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದಾರೆ. ಇವರ ಮೇಲೆ ಕೂಡ ಸಿಓಡಿ ತನಿಖೆ ಆಗಲಿ. ಸಿಓಡಿ ಎನ್‌ಕ್ವೈಯರಿ ಇರತಕ್ಕದ್ದು ನಮ್ಮೊಬ್ಬರಿಗೇ ಅಲ್ಲ. ವಿರೋಧ ಪಕ್ಷದವರ ಯಾವುದೇ ಸದಸ್ಯರ ಮೇಲೆ ಸಿಓಡಿ ತನಿಖೆ ಮಾಡುವುದು ಬೇಡವೇ? ಗಂಧದ ಮರ ಎಷ್ಟು ಲೂಟಿ ಮಾಡಿದ್ದಾರೆ. ಎನ್ನತಕ್ಕ ವಿಷಯದ ಮೇಲೆ ನಾವು ಹಕ್ಕುಚ್ಯುತಿ ಕೊಟ್ಟಿದ್ದೇವೆ. ಪ್ರೊಫೆಸರ್ ನಂಜುಂಡಸ್ವಾಮಿಯವರ ಮೇಲೆ ಪುಟ್ಟಸ್ವಾಮಿ ಗೌಡರು ಒಂದು ಹಕ್ಕು ಚ್ಯುತಿ ಕೊಟ್ಟಿದ್ದಾರೆ. ಇವರುಗಳ ಮೇಲೂ ತನಿಖೆ ಆಗಲಿ. ಎಲ್ಲಾ ತನಿಖೆ ಆಗಲಿ. ಇವತ್ತು ಈ ರಾಮ ಮಂದಿರ ಕಟ್ಟುತ್ತೇವೆ. ಎಂದು ಎಷ್ಟು ದುಡ್ಡು ವಸೂಲಿ ಮಾಡಿದ್ದೀರಿ ? ಇದಕ್ಕೆ ಮೊದಲು ಲೆಕ್ಕಕೊಡಿ. ಎಷ್ಟು ರಾಮಮಂದಿರ ಕಟ್ಟಿದ್ದೀರಿ? ಎಷ್ಟು ಜನರ ಕೊಲೆ ಮಾಡಿದ್ದೀರಿ ? ಎಷ್ಟು ಜನರನ್ನು ಸಾಯಿಸಿದ್ದೀರಿ. ಆ ದುಡ್ಡೆಲ್ಲಾ ಏನು ಮಾಡಿದ್ದೀರಿ? ಯಾವ ಎಲೆಕ್ಷನ್‌ಗೆ ಖರ್ಚು ಮಾಡಿದಿರಿ, ಉಪಯೋಗಿಸಿದಿರಿ. ನೀವು ಇದರ ಲೆಕ್ಕ ಕೊಡಿ. ನೀವು ಜನರಲ್ ಎಲೆಕ್ಷನ್‌ಗೆ ಉಪಯೋಗಿಸಿದಿರಾ ? ಜನರಿಗೆ ಉತ್ತರ ಕೊಡಬೇಕು. ಮೋಸ ಮಾಡಿದ್ದೀರಿ. ನೀವು ಮಿಸ್‌ಚೀಫ್ ಮಾಡಿದ್ದೀರಿ. ಕೋಟಿಗಟ್ಟಲೆ ವಸೂಲಿ ಮಾಡಿದ್ದೀರಿ. ಹಣ ಎಲ್ಲಿ ತೆಗೆದುಕೊಂಡು ಹೋದಿರಿ?

(ಗೊಂದಲ)

ಶ್ರೀ ಹೆಚ್ ಏಕಾಂತಯ್ಯ :- ಇದು ಯಾವ ಪಾಯಿಂಟ್ ಆಫ್ ಆರ್ಡರ್ ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಪಾಯಿಂಟ್ ಆಫ್ ಆರ್ಡರ್ ಎಂದರೆ ಏನೂ ಬೇಕಾದರೂ ಮಾತನಾಡಬಹುದು. ಇದು ಏನು ಎಂದು ಅರ್ಥ ಆಗುವುದಿಲ್ಲ. ಇದು ಯಾವ ಪಾಯಿಂಟ್ ಆಫ್ ಆರ್ಡರ್ ?

(ಗೊಂದಲ)

ಶ್ರೀ ಕೆ. ಎಸ್. ಕಾಳಮರಿಗೌಡ :- ಕಾನೂನು ಕಟ್ಟಳೆಗಳು ಇಲ್ಲ.

(ಗೊಂದಲ)

ಅಧ್ಯಕ್ಷರು :- ನಾನು ಯಾರನ್ನು ಕರೆಯುತ್ತೇನೆ ಅವರು ಅಷ್ಟೇ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ತಾವು ನನ್ನನ್ನು ಕರೆದಿದ್ದೀರಿ.

ಅಧ್ಯಕ್ಷರು :- ನಾನು ಜಾಲಪ್ಪನವರನ್ನು ಕರೆದಿದ್ದೇನೆ.

ಶ್ರೀ ಕೆ.ಎಸ್ ಕಾಳಮರಿಗೌಡ :- ರಾಮನ ಲೆಕ್ಕ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಿಮ್ಮ ಕಾಗೋಡು ತಿಮ್ಮಪ್ಪನವರು ಮಾಡಿರುವದಕ್ಕೆ ಲೆಕ್ಕ ಕೊಡಿ. ಆಮೇಲೆ ರಾಮ ಮಂದಿರದ ಲೆಕ್ಕ ಕೊಡುತ್ತೇನೆ. ಗೃಹ ಮಂಡಲಿಯಲ್ಲಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ್ದೀರಿ. ನಿಮಗೆ ಮಾನ ಮರ್ಯಾದೆ ಇದೆಯೇ ?

(ಗೊಂದಲ)

ಅಧ್ಯಕ್ಷರು :- ಯಾವುದೂ ರಿಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಮಾಡಿರುವಂಥ ಅವ್ಯವಹಾರಗಳಿಗೆ, ನಿಮಗೆ ಮಾನ-ಮರ್ಯಾದೆ ಇದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕಾಗಿತ್ತು. ಜನರ ಪ್ರತಿನಿಧಿಗಳಾಗಿ ಲೂಟಿ ಮಾಡಿದ್ದಾರೆ ........

ಅಧ್ಯಕ್ಷರು :- ಯಾವುದೂ ಕಡತದಲ್ಲಿ ಹೋಗುವಂತಿಲ್ಲ.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದುದನ್ನು ದಾಖಲು ಮಾಡಿಕೊಳ್ಳಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೆ, ಇವೊತ್ತು ರಾಮನವಮಿ. ಇವರಿಗೆ (ಯಡಿಯೂರಪ್ಪನವರಿಗೆ) ಏನಾಗಿದೆಯೆಂದು ನನಗೆ ಗೊತ್ತಾಗುತ್ತಿಲ್ಲ. ಇವೊತ್ತು ಒಳ್ಳೆಯ ಪರಿಣಾಮವಾಗಬೇಕಾಗಿತ್ತು. ಏನೋ ಬದಲಾವಣೆಯಾದಂತೆ ಕಾಣುತ್ತದೆ. ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ನಾವು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇವೆ. ಮಾನ್ಯ ಜಾಲಪ್ಪ ನವರು ಒಂದು ಮಹತ್ವವಾದ ವಿಷಯವನ್ನು ಪ್ರಸ್ತಾಪಿಸಲು ಹೋದರೆ, ಇದರ ಬಗ್ಗೆ ತಾವು(ಯಡಿಯೂರಪ್ಪ) ತಗಾದೆ ತೆಗೆದಿರಿ. ಇಷ್ಟರೊಳಗೆ ಎಲ್ಲಾ ವಿಷಯ ಮುಗಿದು ಹೋಗಬೇಕಾಗಿತ್ತು.

ಶ್ರೀ ಬಿ. ಎಸ್. ಯಡಿಯೂರಪ್ಪ:-(ಏರಿದ ಧ್ವನಿಯಲ್ಲಿ) ನಾನು ತೆಗೆಯಲಿಲ್ಲ....... ನಿಮ್ಮಲ್ಲಿರುವ ಕೆಲವರ ನಡವಳಿಕೆಯನ್ನು ನಾನು ಮಾಡಿದ್ದೇನೆ. ಈಗಲೂ ನಾನು ಅದೇ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ:-ಇಲ್ಲಿರುವ 225 ಜನ ಸದಸ್ಯರಲ್ಲಿ ಯಡಿಯೂರಪ್ಪನವರು ಬಹಳ ಪ್ರಾಮಾಣಿಕರೆಂದು ಕಾಣುತ್ತದೆ. ಅವರಿಗೆ ಸರ್ಟಿಫಿಕೇಟು ಕೊಟ್ಟು, ಅದನ್ನವರು ತೆಗೆದುಕೊಂಡು ಹೋಗಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ :- ನನಗೆ ಯಾವ ಸರ್ಟಿಫಿಕೇಟ್ ಬೇಡ. ನಿಮ್ಮ ಸರ್ಟಿಫಿಕೇಟ್, ಅವರ ಸರ್ಟಿಫಿಕೇಟ್ ತೆಗೆದುಕೊಂಡು ನಾನೇನು ಮಾಡಲಿ? ನನಗೆ ಸರ್ಟಿಫಿಕೇಟ್ ಅಗತ್ಯವಿಲ್ಲ. ಜನರು ಏನೆಂದು ತಿಳಿದುಕೊಳ್ಳುತ್ತಾರೆ? ನಾವು-ನೀವು ಸೇರಿ ಕೆಲಸ ಮಾಡೋಣ. ಆಶ್ರಯ ಯೋಜನೆಯಲ್ಲಿ ಮಾಡಿರುವ ಬಣ್ಣ ಬಯಲಾಗಿದೆಯಲ್ಲಾ. ಅವರು ಡಿಫೆಂಡ್ ಮಾಡಿಕೊಂಡು ಅವರ ಕ್ಷೇತ್ರಕ್ಕೆ ಹೋಗಿ ವಾಪಸ್ಸು ಬರಲಿ, ಗೊತ್ತಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ :- ಯಡಿಯೂರಪ್ಪನವರಿಗೆ ಬಿಪಿ ಜಾಸ್ತಿಯಾಗಿದೆ. ಅವರನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ತೋರಿಸಬೇಕಾಗಿದೆ. ಏಕೆಂದರೆ ಅವರ ಆರೋಗ್ಯದ ಬಗ್ಗೆಯೂ ನಾವು ಚಿಂತೆ ಮಾಡಬೇಕಾಗಿದೆ! ಕೆಲವರು ರಾಮನ ಲೆಕ್ಕ ಕೇಳುತ್ತಾರೆ, ಕೆಲವರು ಕಾಗೋಡು ತಿಮ್ಮಪ್ಪನವರ ಲೆಕ್ಕ ಕೇಳುತ್ತಿದ್ದಾರೆ. ಈ ರೀತಿ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ತಾವು ಸದನವನ್ನು ನಿಯಂತ್ರಣದಲ್ಲಿಡಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ :- ಸನ್ಮಾನ್ಯ ಅಧ್ಯಕ್ಷರೆ, ನಾನು ಮೊದಲು ಪ್ರಸ್ತಾಪಿಸಿದ್ದು ಏನೆಂದರೆ, ಚಿನ್ನಪ್ಪ ರೆಡ್ಡಿ ಆಯೋಗ ವರದಿ ಬಗ್ಗೆ ಒಂದು ಹಕ್ಕುಚ್ಯುತಿ ಕಳುಹಿಸಿದ್ದೆ. ನಾನು ನಾಳೆಯಿಂದ ನಾಲ್ಕು ದಿವಸಗಳ ಕಾಲ ಸಭೆಗೆಬರುತ್ತಿಲ್ಲ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇರುವುದರಿಂದ ಈಗಲೇ ಮಾತನಾಡೋಣ ಎಂದು ಎದ್ದು ನಿಂತಿದ್ದೇನೆ. ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಏನೂ ತಿಳಿದುಕೊಂಡಿದ್ದಾರೆಂದರೆ

ಅಧ್ಯಕ್ಷರು :- ಅದರ ಬಗ್ಗೆ ನೀವು ಪ್ರಸ್ತಾಪ ಮಾಡಬೇಡಿ.

ಶ್ರೀ ಆರ್.ಎಲ್. ಜಾಲಪ್ಪ :- ಅದರ ಬಗ್ಗೆ ನಾನು ಹೇಳಬೇಕಾಗುತ್ತದೆ. ಇದರ ಹಿನ್ನೆಲೆ ಏನೆಂದು ಹೇಳುತ್ತೇನೆ.

(ಗೊಂದಲ)

ಯಡಿಯೂರಪ್ಪನವರು ಏನು ತಿಳಿದುಕೊಂಡಿದ್ದಾರೆಂದರೆ ಕಾಗೋಡು ತಿಮ್ಮಪ್ಪನವರು ಮತ್ತು ಜಾಲಪ್ಪನವರು ಇವರಿಬ್ಬರು ಈಡಿಗರು ಅವರಿಗೂ ಇವರಿಗೂ ಸಂಬಂಧವಿದೆಯೆಂದು ನಿಜ.... ಸ್ವಲ್ಪ ದಯವಿಟ್ಟು ಸುಮ್ಮನಿರಿ ನನಗೂ ಅನುಭವವಿದೆ. ನನಗೆ ಈಗ 67 ವರ್ಷ ಮುಗಿದು 68ನೇ ವರ್ಷವಾಗುತ್ತಿದೆ. ನಿಮಗೊಬ್ಬರಿಗೇ (ಯಡಿಯೂರಪ್ಪನವರಿಗೆ) ನಾಲಿಗೆ, ಗಂಟಲು ಇರೋದು ಅಲ್ಲ. ನನಗೂ ಇದೆ. ದಯವಿಟ್ಟುಕುಳಿತುಕೊಳ್ಳಿ. ಇವರು ಮಾತನಾಡುವಾಗ ಅದನ್ನು ದಾರಿ ತಪ್ಪಿಸುವುದಕ್ಕೆ ಇದನ್ನು ಶುರು ಮಾಡಿದ್ದಾರೆ ಎಂದು ಏನು ಹೇಳಿದ್ದಾರೆ, ಅಂಥ ಸಣ್ಣ ಮನುಷ್ಯ ನಾನಲ್ಲ. ಕಾಗೋಡು ತಿಮ್ಮಪ್ಪನವರಿಗೂ ನನಗೂ ಸಂಬಂಧವಿದೆ. ನಮ್ಮ ತಾಲೂಕಿನಲ್ಲಿ ಎಷ್ಟು ಮನೆಗಳನ್ನು ಕಟ್ಟಿಕೊಟ್ಟಿದ್ದಾರೆಂದು ಕೇಳಿ. ಇದೇ ಸದನದಲ್ಲಿ ನಾನು ಚಾರ್ಜ್ ಮಾಡಿದ್ದೇನೆ. 35 00 ಸಾವಿರ ಮನೆಗಳು ಸಂಪೂರ್ಣವಾಗಿ ಬಿದ್ದು ಹೋಗಿವೆ. ಒಂದೂ ಮನೆ ಕೊಡಲಿಲ್ಲ ಪಕ್ಕದ ತಾಲೂಕಿನಲ್ಲಿ 5000 ಮನೆಗಳನ್ನು ಕೊಟ್ಟಿದ್ದೀರೆಂದು ನಾನು ಹೇಳಿದ್ದೇನೆ. ಬೇಕಾದರೆ ಕೇಳಿ. ಇವತ್ತಿನವರೆವಿಗೂ ಆಶ್ರಯ ಯೋಜನೆಯಡಿಯಲ್ಲಿ ನನ್ನ ತಾಲೂಕಿನಲ್ಲಿ ಒಂದು ಮನೆ ಆಗಿಲ್ಲ. ಇದೆ ನೆಂಟಸ್ತಿಕೆ ನನಗೂ ಅವರಿಗೂ ಇರೋದು. ಇವತ್ತಿನವರೆಗೂ ನಾನು ಅವರ ಮನೆ ಬಾಗಿಲಿಗೆ ಹೋಗಿಲ್ಲ. ಬೇಕಾದರೆ ಅವರನ್ನು ಕೇಳಿ ಆದುದರಿಂದ ಸದನದಲ್ಲಿ ನಾನು ದೈವಸಾಕ್ಷಿಯಾಗಿ ಪ್ರಮಾಣ ಮಾಡಿ ಹೇಳುತ್ತಿದ್ದೇನೆ. ಈ ಸಣ್ಣತನ ನನಗೆ ಹೇಳಬೇಡಿ. ಇದೆಲ್ಲಾ ನಿಮಗೆ ರಿಸರ್ವ್ ಆಗಿರೋದು. I cannot do that ನಾನು ಬಂಗಾರಪ್ಪ ಜೊತೆಯಲ್ಲಿದ್ದೆವು. ನೀವು ಮಾತ್ರ ಸತ್ಯ ಹರಿಶ್ಚಂದ್ರರಂತೆ..........

ಶ್ರೀ ಬಿ.ಎಸ್. ಯಡಿಯೂರಪ್ಪ :- ಯಾರ ಯೋಗ್ಯತೆ ಏನೆಂದು ಡಾ. ಜೀವರಾಜ ಆಳ್ವ ಅವರೇ ಬಯಲು ಮಾಡಿದ್ದಾರೆ. ನಾನೇನು ಮಾಡಬೇಕಾಗಿಲ್ಲ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ :- ನಾನು ಈ ಮನೆಯಲ್ಲಿ 4-5 ವರ್ಷಗಳಿಂದ ಇದ್ದೇನೆ. ಈ ಸಣ್ಣತನವನ್ನು ತಾವು ನನಗೆ ಹೇಳಬೇಕಾಗಿಲ್ಲ. ಅದು ನಿಮಗೆ ಮೀಸಲಾಗಿದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :- ಸಣ್ಣತನ ಯಾರಿಗೆ ಇದೆ ಎನ್ನುವ ಬಗ್ಗೆ ನಿಮ್ಮ ಕಡೆಯವರೇ ಆದ ಡಾ. ಆಳ್ವರವರು ಬಯಲು ಮಾಡಿದ್ದಾರೆ. ಬಿ.ಎಸ್. ಯಡಿಯೂರಪ್ಪ ಇಲ್ಲದಿದ್ದರೆ ನೀವೆಲ್ಲರೂ ಸಹ ಅವರೊಂದಿಗೆ ಶಾಮೀಲಾಗಿ ಭ್ರಷ್ಟಾಚಾರವನ್ನು, ಅಕ್ರಮಗಳನ್ನು ಮುಚ್ಚಿಹಾಕುತ್ತಿದ್ದಿರಿ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ :- ನೀವೇನು ಮಹಾ ಸತ್ಯ ಹರಿಶ್ಚಂದ್ರರಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಕೂಡ ಅವರೊಂದಿಗೆ ಭ್ರಷ್ಟಾಚಾರದಲ್ಲಿ ಶಾಮಿಲಾಗಿದ್ದೀರೆಂದು ಜಗತ್ತಿಗೆ ಗೊತ್ತಿದೆ. ನಿಮ್ಮ ಯೋಗ್ಯತೆಯ ಬಗ್ಗೆ ಜಗತ್ತಿಗೆ ಗೊತ್ತಿದೆ. ನೀವು ಏನೇನು ಲೂಟಿ ಮಾಡಿದ್ದೀರಿ ಎನ್ನುವ ಬಗ್ಗೆ ವೀರಪ್ಪ ಮೊಯ್ಲಿಯವರ ಹತ್ತಿರ ಫೈಲೇ ಇದೆ.

(ಗೊಂದಲ)

ಅಧ್ಯಕ್ಷರು :- ನಾನು ಜಾಲಪ್ಪನವರನ್ನು ಮಾತನಾಡಲು ಕರೆದಿದ್ದೇನೆ. ಅವರು ಮಾತನಾಡಲಿ, ಅವರು ಮಾತನಾಡಿದ ನಂತರ ನೀವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು 4 ಸಾರಿ ಮಾತನಾಡಲು ಕೇಳಿದ್ದೇನೆ. ಆದರೆ ನನಗೆ ಅವಕಾಶ ಕೊಡಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ :- ಅವರಿಗೇ ಈ ಮನೆಯನ್ನು ಭೋಗ್ಯ ಮಾಡಿಬಿಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವೆಲ್ಲ ಭ್ರಷ್ಟಾಚಾರದಲ್ಲಿ ಶಾಮಿಲಾಗಿದ್ದೇವೆ. ಅದನ್ನು ಮುಚ್ಚಿ ಹಾಕಲು ಪ್ರಯತ್ನ ಮಾಡಿದ್ದೇವೆ. ಎನ್ನುವ ಬಗ್ಗೆ ಅವರು ಹೇಳಿದ್ದು ಕಡತದಲ್ಲಿ ಹೋಗಿದೆ. ಅದನ್ನು ತೆಗೆಸಿ ಹಾಕಬೇಕು. ನಮಗೂ ಸಹ ಮಾನ-ಮರ್ಯಾದೆ ಇದೆ. ಅದು ಇವರಿಗೊಬ್ಬರಿಗೆ ಇರೋದು ಅಲ್ಲ. ಅವರು ಏನು ಮಾತನಾಡುತ್ತಾರೆ? ನಾವು ಶಾಮಿಲಾಗಿ ಅವರ ಜೊತೆ ರಾಜಕೀಯ ಮಾಡುತ್ತಿಲ್ಲ, ಯಡಿಯೂರಪ್ಪನವರೇನೂ ಉತ್ತಮವಾಗಿ ರಾಜಕೀಯ ಮಾಡುತ್ತಾರೋ?

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾವು ಏನು ಮಾಡಿದ್ದೇವೆಂದು ಹೇಳಲೀ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾಡಬಾರದ ಕೆಲಸ ಮಾಡಿದ್ದಿರೀ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾವೇನು ಕದ್ದು ಕೆಲಸ ಮಾಡಿಲ್ಲ. ನೀವು ಏನು ಮಾಡಿದ್ದೀರಿ ಎನ್ನುವ ಬಗ್ಗೆ ಜಗತ್ತಿಗೆ ಗೊತ್ತು ವೀರಪ್ಪಮೊಯ್ಲಿಯವರ ಕಾಲನ್ನು ಹಿಡಿದುಕೊಂಡು, ಮೆಡಿಕಲ್ ಕಾಲೇಜನ್ನು ತೆಗೆದುಕೊಂಡಿದ್ದೀರಿ. ಆದರಿಂದ ಡೊನೇಷನ್ ತೆಗೆದುಕೊಳ್ಳುತ್ತಿಲ್ಲವೆ?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ :- ಇವರು ಏನು ಈ ರೀತಿ ಮಾತನಾಡುತ್ತಿದ್ದಾರೆ. ಇವರನ್ನು ಆಸ್ಪತ್ರೆಗೆ ಸೇರಿಸಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಪ್ರಮುಖವಾದ ವಿಚಾರವನ್ನು ಮುಚ್ಚಿಹಾಕುತ್ತಿದ್ದೀರಿ ಎನ್ನುವ ಬಗ್ಗೆ ಡಾ. ಆಳ್ವ ಅವರ ಬಗ್ಗೆ ಹೇಳಲಿಲ್ಲವೆ.

(ಗೊಂದಲ)

ಅಧ್ಯಕ್ಷರು :- ಯಡಿಯೂರಪ್ಪನವರೇ, ಮಾಧುಸ್ವಾಮಿಯವರೇ, ತಾವೆಲ್ಲ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ಇನ್ನು ಮುಂದಕ್ಕೆ ಹೋಗಬೇಡಿ, ಸುಮ್ಮನಿರಿ.

ಶ್ರೀ ಆರ್. ಎಲ್. ಜಾಲಪ್ಪ :- ದಯವಿಟ್ಟು ಕುಳಿತುಕೊಳ್ಳಿ ಅನ್ನಿಸಿಕೊಂಡವರಿಗೆ ಅದು ಗೊತ್ತಾಗುತ್ತದೆ. ಈಗ ನಿಮಗೇನು ಗೊತ್ತಾಗುತ್ತದೆ? ತಿಮ್ಮಪ್ಪನವರು ಪ್ರೊಟೆಕ್ಟ್ ಮಾಡುವ ಪ್ರಶ್ನೆಯೂ ಇಲ್ಲ. ಮಾನ್ಯ ಮೊಯ್ಲಿಯವರು ಪ್ರೊಟೆಕ್ಟ್ ಮಾಡತಕ್ಕ ಪ್ರಶ್ನೆಯು ಇಲ್ಲ. ಯಾರೂ ಕೂಡ ಪ್ರೊಟೆಕ್ಟ್ ಮಾಡತಕ್ಕ ಪರಿಸ್ಥಿತಿ ಇಲ್ಲ. ನಾನು ಪರ್ಸನಲ್ ಆಗಿ ಹೋಗಿ ಯಾರ ಹತ್ತಿರವೂ ಹೋಗಿ ಹಲ್ಲನ್ನು ಗಿಂಜಬೇಕಾಗಿಲ್ಲ. ನನ್ನ ಸ್ವಂತಕ್ಕಾಗಿ ನಾನು ಯಾರ ಹತ್ತಿರವೂ ಹೋಗಬೇಕಾಗಿಲ್ಲ. ಮಾನ್ಯ ಬಂಗಾರಪ್ಪನವರೂ ನಾನೂ ಜೊತೆಯಲ್ಲೇ ಇದ್ದೆವು. ನಾನು ಅವರೂ ಒಂದೇ ಜಾತಿ ಆದರೂ ಕೂಡ ನಾನು ಅವರ ಜೊತೆ ಹೋಗಲಿಲ್ಲ. ನೀವು ಹೋಗಿ, ನನ್ನ ಪಾಡಿಗೆ ನಾನು ಹೋಗುತ್ತೇನೆಂದು ಹೇಳಿದೆ. ಮಾನ್ಯ ಬಂಗಾರಪ್ಪನವರ ಬಗ್ಗೆ ನಾವು ಏನು ಮಾತನಾಡಿದ್ದೇವೆಂಬುದು ಕಡತದಲ್ಲಿದೆ. ಆದ್ದರಿಂದ ಇವರ ಸಣ್ಣತನವನ್ನು ನಮಗೆ ತೋರಿಸುವುದು ಬೇಡ ನಾವು ಯಾರ ಮರ್ಯಾದೆಯನ್ನೂ ಹರಾಜು ಹಾಕಿ ನಾವು ದೊಡ್ಡ ಮನುಷ್ಯರಾಗಬೇಕೆಂದು ಇಲ್ಲಿಗೆ ಬಂದವರಲ್ಲ. ಇದನ್ನು ದಯವಿಟ್ಟು ಅವರು ಅರ್ಥ ಮಾಡಿಕೊಳ್ಳಬೇಕು. ಇದೇ ರೀತಿ ಈ ಸಭೆಯನ್ನು ನಡೆಯುವುದಕ್ಕೆ ಬಿಟ್ಟರೆ ಇನ್ನು ನಾಳೆಯಿಂದ ನಾವು ಈ ಸಭೆಗೆ ಬರಬೇಕಾದುದು ಅನಾವಶ್ಯಕವೆಂದು ಹೇಳಬಯಸುತ್ತೇನೆ. ಇಲ್ಲಿ ಗಂಟಲು ದೊಡ್ಡದಾಗಿರುವವರಿಗೆ ಅವಕಾಶ ಸಿಗುತ್ತದೆ. ನಮ್ಮಂತಹವರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕುವುದಿಲ್ಲ. ತಾವು ಇವತ್ತು ಬೆಳಗ್ಗಿನಿಂದ ನೋಡಿರಬಹುದು. ನಾನು ಸುಮಾರು 7-8 ಸಾರಿ ಎದ್ದು ನಿಂತು ನಿಂತೂ ಸುಮ್ಮನೆ ಕುಳಿತಿದ್ದೇನೆ. ಈಗ ನಾನು ಇದನ್ನು ಬೇಗ ಮುಗಿಸುವ ಉದ್ದೇಶವೆಂದರೆ 5 ಗಂಟೆಗೆ ನಾನು ಮಾನ್ಯ ಭೈರೇಗೌಡರು, ಮಾನ್ಯ ಕೃಷ್ಣಾರವರನ್ನು ಭೇಟಿ ಮಾಡಬೇಕಾಗಿತ್ತು. ಮಾನ್ಯ ಕೃಷ್ಣಾರವರು ನಮ್ಮನ್ನು ಅಲ್ಲಿಗೆ ಬರಲು ಹೇಳಿದ್ದರು. ಅವರು ಹೋದರು, ನಾನು ಹೋಗುವುದಕ್ಕಾಗಲಿಲ್ಲ. ಆದ್ದರಿಂದ ಇದನ್ನು ಹೇಳಿ ಹೋಗೋಣವೆಂದು ಎದ್ದುನಿಂತನೇ ಹೊರತು ಇಲ್ಲಿ ಅಪ್‌ಸ್ಟ್ರಕ್ಟ್ ಮಾಡಬೇಕು ಇವರು ಅವರ ಮೇಲೆ ಛಾರ್ಜ್ ಮಾಡುತ್ತಿದ್ದಾರೆ. ಅವರು ಏನು ತಿಂದಿರಬಹುದೆಂದು ನನಗೇನೂ ಇಲ್ಲ. ಸರ್ಕಾರ ಇದೆ. ಕಾನೂನು ಇದೆ. ಇವರದ್ದೇ ತಪ್ಪಿರಬಹುದು. ಅಥವಾ ಅವರದ್ದೇ ತಪ್ಪಿರಬಹುದು. ಅವರವರ ಹಣೆಬರಹ ಅವರು ಏನೂ ಬೇಕಾದರೂ ಮಾಡಿಕೊಳ್ಳಲಿ ಇಷ್ಟು ಹೇಳಿದ ನಂತರ ನನ್ನ ಒಂದೇ ಒಂದು ಮನವಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಎಂದರೇ, ನಾನು ಎಂಟನೇ ತಾರೀಖು ಇಲ್ಲಿ ಮಾತನಾಡುವಾಗ ಮಾನ್ಯ ಸಿಂಧ್ಯಾರವರು ಚಿನ್ನಪ್ಪ ರೆಡ್ಡಿ ಕಮಿಷನ್ ಬಗ್ಗೆ ಮಾತನಾಡಿದರು. ತಾವು ಅವತ್ತು ಬಹಳ ದೃಢವಾಗಿ ಇದನ್ನು ಜೂನ್ ತಿಂಗಳ ಒಳಗೆ ಇದನ್ನು ಜಾರಿಗೆ ಕೊಡುತ್ತೇನೆ. ಇಷ್ಟು ದಿವಸ ತಡವಾಗಿರತಕ್ಕದ್ದು ನಮ್ಮ ತಪ್ಪು ಎಂದು ಹೇಳಿದ್ದಿರಿ. ನಾವು ಅದನ್ನು ಮೇಜು ಕುಟ್ಟಿ ಸ್ವಾಗತ ಮಾಡಿದೆವು. ಆದರೆ ಕನ್ನಡ ಪ್ರಭ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬೇರೆ ರೀತಿ ಬಂದಿದೆ. ತಾವು ಲೆಜಿಸ್ಲೆಚರ್ ಪಾರ್ಟಿ ಮೀಟಿಂಗ್‌ನಲ್ಲಿ ಮಾತನಾಡುವಾಗ ನಾನು ಆ ರೀತಿ ಹೇಳಿಲ್ಲ. ಎಂದು ಹೇಳಿರುವುದಾಗಿ ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ನಾನು ತಮ್ಮನ್ನು ಕೇಳಬಯಸುತ್ತೇನೆ. ತಾವು ಬಹಳ ಜವಾಬ್ದಾರಿಯುತವಾಗಿ ಹೇಳಿದ್ದೀರಿ. ಬೇರೆ ಮಂತ್ರಿಗಳ ರೀತಿಯಲ್ಲ ಒಂದನೇ ತಾರೀಖಿನಿಂದ ಕನ್ನಡ ಆಡಳಿತದಲ್ಲಿ ಜಾರಿಗೆ ಬರದಿದ್ದರೆ ನಾನೇ ಹೋಗಿ ಎಲ್ಲವನ್ನೂ ಅಳಿಸಿ ಬಿಡುತ್ತೇನೆಂದು ತಾವು ಬಹಳ ಹುಮ್ಮಸ್ಸಿನಿಂದ ಹೇಳಿದ್ದಿರಿ. ಅದನ್ನು ಇವತ್ತು ಹೇಳಿ, ಏಕೆಂದರೆ ಏನೇ ಇದ್ದರು ಅದು ಹೊಟ್ಟೆಯೊಳಗೆ ಇರಬೇಕು. ಅದು ಬಾಯಿಯಿಂದ ಹೊರಗೆ ಬಂದ ಮೇಲೆ ಅದನ್ನು ನಡೆಸಿಕೊಡಬೇಕು. ಏನು ಮಾಡಬೇಕೆಂಬುದು ತಮ್ಮ ಮನಸ್ಸಿನಲ್ಲಿರಲಿ. ಆದರೆ ಹೇಳುವಾಗ ಯೋಚನೆ ಮಾಡಿ ಹೇಳಿ. ನಾನು ಹಿಮಾಲಯ ಪರ್ವತವನ್ನೇ ನೆಗೆಯುತ್ತೇನೆಂಬ ಭರವಸೆಯಿದ್ದರು ಕೂಡಾ ನಾನು ಸಣ್ಣ ಗುಡ್ಡ ಮಾತ್ರ ನೆಗೆಯ ಬಲ್ಲೆ ಎಂದು ಹೇಳಬೇಕು. ತಾವು ಹೇಳಿರ ತಕ್ಕದ್ದರ ಬಗ್ಗೆ ಇವತ್ತು ಬೆಳಿಗ್ಗೆ

ಬಹಳ ದೊಡ್ಡ ರಾದ್ಧಾಂತವಾಯಿತು. ತಾವು ಆ ಸಂದರ್ಭದಲ್ಲಿ ಇರಲಿಲ್ಲ. ಅದು ಏನೇ ಇರಲಿ ತಾವು ನಮಗೆ ಬಹಳ ಜವಾಬ್ದಾರಿಯುತವಾಗಿ ಆಶ್ವಾಸನೆಯನ್ನು ಕೊಟ್ಟಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ತಾವು ನಮಗೆ ಕೊಟ್ಟಿರತಕ್ಕ ಆಶ್ವಾಸನೆ ಸರಿಯೇ? ಅಥವಾ ತಮ್ಮ ಲೆಜಿಸ್ಲೆಚರ್ ಪಾರ್ಟಿಯಲ್ಲಿ ಹೇಳಿರತಕ್ಕದ್ದು ಸರಿಯೇ? ಎಂಬುದನ್ನು ದಯವಿಟ್ಟು ಕ್ಲಾರಿಫೈ ಮಾಡಬೇಕು. ಒಂದು ವೇಳೆ ತಾವು ಲೆಜಿಸ್ಲೇಚರ್ ಪಾರ್ಟಿಯಲ್ಲಿ ಹೇಳಿರುವುದೇ ನಿಜವಾದಲ್ಲಿ ನಾನು ತಮ್ಮ ಮೇಲೆ ಇಲ್ಲಿ ಒಂದು ಹಕ್ಕು ಚ್ಯುತಿಯನ್ನು ಮೂವ್ ಮಾಡಬೇಕಾಗುತ್ತದೆ. ಇದರ ಬಗ್ಗೆ ತಮ್ಮಿಂದ ನನಗೆ ಉತ್ತರಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಮಾನ್ಯ ಜಾಲಪ್ಪನವರು ಪ್ರಸ್ತಾಪ ಮಾಡಿರತಕ್ಕ ವಿಚಾರಕ್ಕೆ ಮೊದಲು ಉತ್ತರ ಕೊಟ್ಟು ನಂತರ ಆಶ್ರಯ ಯೋಜನೆಯ ಬಗ್ಗೆ ಸಿಓಡಿ ವರದಿ ಇದೆ. ಅದನ್ನು ಸಭೆಗೆ ತಿಳಿಸುತ್ತೇನೆ.

ಮಾನ್ಯ ಜಾಲಪ್ಪನವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಹೇಳುವುದಾದರೆ 1 993ನೇ ಜೂನ್ 30ನೇ ತಾರೀಖಿನೊಳಗೆ ಚಿನ್ನಪ್ಪರೆಡ್ಡಿ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಏನು ಹೇಳಿದ್ದೇನೆ. ಅದು ಸತ್ಯ. ಇದರಲ್ಲಿ ಏನೂ ಬದಲಾವಣೆ ಇಲ್ಲ. ಅದರ ಬಗ್ಗೆ ವಿವರ ಹೇಳಬೇಕಾಗಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ :- ಹಾಗಾದರೆ ತಾವು ಈಗ ಹೇಳುತ್ತಿರುವುದು ಸತ್ಯ ತಾನೆ.

ಶ್ರೀ ಎಂ. ವೀರಪ್ಪ ಮೊಯ್ಲಿ :- ಹೌದು. ಇದರಲ್ಲಿ ಯಾವುದೇ ಎರಡು ಮಾತಿಲ್ಲ. ಮಾನ್ಯ ವಿರೋಧ ಪಕ್ಷದ ಮಾನ್ಯ ಜಾಲಪ್ಪನವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ದೇಶಪಾಂಡೆಯವರು ಸೇರಿದಂತೆ ಆಶ್ರಯ ಯೋಜನೆಯಲ್ಲಿ ಕಾಂಟ್ರಾಕ್ಟರ್‌ಗಳ ವಿಚಾರದಲ್ಲಿ ಗೃಹಮಂಡಳಿಯವರು ಯಾವುದೇ ಭದ್ರತೆ ಇಲ್ಲದೆ ಮುಂಗಡ ಹಣವನ್ನು ಕೊಟ್ಟಿರತಕ್ಕ ವಿಚಾರವನ್ನು ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾವು ಈಗಾಗಲೇ ಸಿಓಡಿಗೆ ಒಪ್ಪಿಸಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಿಮ್ಮ ಹೇಳಿಕೆಯ ಕಾಪೀಸ್ ಇದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ :- ಕಾಪೀಸ್ ಏನೂ ಇಲ್ಲ. ಇದು ನನ್ನ ಓರಲ್ ಸ್ಟೇಟ್‌ಮೆಂಟ್. ಈ ವಿಚಾರವನ್ನು ನಾವು ಸಿಓಡಿಗೆ ಕಳುಹಿಸುವಾಗ ಆಗಲಿ ಅಥವಾ ಕಳುಹಿಸಿದ ಮೇಲಾಗಲಿ ಯಾವುದೇ ರಾಜಕೀಯ ಇಲ್ಲ. ನಾನು ಬಹಳ ಶಾಂತಿ ಸಂಯಮದಿಂದ ಇಲ್ಲಿ ಕುಳಿತು ಎಲ್ಲವನ್ನು ನೋಡುತ್ತಿದ್ದೆ. ಇವರಿಗೆ ಏತಕ್ಕೆ ಈ ಉದ್ರೇಕ, ಆತುರ, ಕಾತುರಗಳು ಮೇಲಕ್ಕೆ ಬರುತ್ತಿವೆ ಎಂದು ನೋಡುತ್ತಿದ್ದೆ. ಏತಕ್ಕೆ ಈ ರೀತಿ ಇದನ್ನು ರಾಜಕೀಯ ದಾಳವನ್ನಾಗಿ ಉಪಯೋಗಿಸುತ್ತಿದ್ದಾರೆ. ನನಗನಿಸುತ್ತವೆ ಬಿ.ಜೆ.ಪಿಗೆ ಈ ಒಂದು ರಾಜಕೀಯ ದಾಳ ಆಗತ್ಯವಿಲ್ಲವೆಂದು ಕಾಣಿಸುತ್ತದೆ. ಇದ್ಯಾಕೆ ಬೇಕು, ನಿಮಗೆ ಇಲ್ಲಿ ಏನಾದರೂ ಶಿವಮೊಗ್ಗದಲ್ಲಿ ಇದನ್ನು ರಾಜಕೀಯ ಬಂಡವಾಳ ಮಾಡಿಕೊಂಡು ತಾವು ಉಪಯೋಗ ಮಾಡುತ್ತೇವೆಂದರೆ ಏನು ಆಗುವುದಿಲ್ಲ. ಕಾಂಗ್ರೆಸ್ ಪಕ್ಷದ ಪ್ರಾಮಾಣಿಕತೆಗೆ ಇನ್ನು ಒಂದು ನೂರು ಪಟ್ಟು ಹೆಚ್ಚು ಓಟು ಶಿವಮೊಗ್ಗದಲ್ಲಿ ಬರುತ್ತದೆ. ತಾವು ಏನು ಹೆದರಬೇಡಿ. ಕಾಂಗ್ರೆಸ್ ಬರುವುದು ಅದು ನಾವು ಬುಟ್ಟಿಗೆ ತೆರೆದಹಾಗೆ ಇರುತ್ತದೆ. ಬುಟ್ಟಿಗೆ ಏನು ಬೀಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಿಜವಾದ ರಾಜಕೀಯ ನೀವು ಮಾಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಇಲ್ಲ ಇಲ್ಲ, ನಾನು ಮಾಡಬಾರದೆಂದು ಹೇಳಿ..... I am not politicalising. ನಾನು ಅದನ್ನು ಪೊಲ್ಟೈಕಲೈಸ್ ಮಾಡುವುದಿಲ್ಲ. ತಾವೂ ಕೂಡ ಪೊಲಟಿಕಲೈಸ್ ಮಾಡಬೇಡಿ. Let the law take its own course. ನಾವು ಪ್ರಾಮಾಣಿಕವಾದಂಥ ಆಡಳಿತವನ್ನು ಕೊಡಬೇಕೆಂದು ಹೇಳಿ ಕಾಂಗ್ರೆಸ್‌ನವರು ಇಲ್ಲಿ ಕುಳಿತುಕೊಂಡಿದ್ದೇವೆ. ನಾವೆಲ್ಲರೂ ಕೂಡ ನಮ್ಮ ಪಕ್ಷದ ಎಲ್ಲರೂ ಕೂಡ ಆ ಮಟ್ಟಿಗೆ ಐಕ್ಯತೆಯಿಂದ,ಸಂಘಟನೆಯಿಂದ ಕುಳಿತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- 185 ಜನರೆಲ್ಲರೂ.

ಶ್ರೀ ಎಂ.ವೀರಪ್ಪ ಮೊಯಲಿ :- 185 ಮಂದಿಗೂ, 185+ತಮ್ಮ ಕಡೆಯಲ್ಲಿ ಎಲ್ಲರೂ ಸೇರಿ. ಇದು ಏಕೆ, ಒಳ್ಳೆಯ ಪ್ರಾಮಾಣಿಕತೆಯ ಆಡಳಿತವನ್ನು ಕೊಡಬೇಕೆಂದರೆ ಮಾನ್ಯ ಬಾಬಾಗೌಡಪಾಟೀಲರಿಗೆ ಮನಸ್ಸು ಇಲ್ಲವೆ, ಅವರು ನಮ್ಮ ಜೊತೆ ಸೇರುವುದಿಲ್ಲವೆ ?

ಶ್ರೀ ವಾಟಾಳ್ ನಾಗರಾಜ್:- 185 ಜನರೂ ಸೇರುತ್ತಾರೆ.

ಶ್ರೀ ಎಂ. ವೀರಪ್ಪಮೊಯ್ಲಿ :- ಈಗ ಮಾನ್ಯ ಯಡಿಯೂರಪ್ಪನವರಿಗೆ ಅದೇ ಪ್ರಾಮುಖ್ಯವಲ್ಲ. ಯಡಿಯೂರಪ್ಪನವರಿಗೆ ಬೇರೆ ಪ್ರಾಮುಖ್ಯತೆಗಳ ಆದ್ಯತೆಗಳಿವೆ. ಏತಕ್ಕೆಂದರೆ ಈಗ ಒಂದು ವೇಳೆ ಅಯೋಧ್ಯೆ ಸಿಕ್ಕಿದರೆ ಅಯೋಧ್ಯೆ, ಮಥುರಾ ಸಿಕ್ಕಿದರೆ ಮಥುರಾ; ಶಿವಮೊಗ್ಗ ಸಿಕ್ಕಿದರೆ ಶಿವಮೊಗ್ಗ. ಯಾವುದಾದರೂ ಒಂದು ಆಯ್ಕೆ ಮಾಡಿಕೊಳ್ಳಬೇಕು. ಇದೆಲ್ಲ ನೀವು ಪರದಾಟ ಮಾಡಲಿಕ್ಕೆ ಹೋಗಿ, ಹೋಗಿ ಇದು ಏನಾಯಿತು ಎಂದರೆ ನಾನು ಬಹಳ ಚಿಕ್ಕವನಿದ್ದಾಗ ಏನು ಮಾಡುತ್ತಿದ್ದೆವು ಎಂದರೆ, ನಮ್ಮಲ್ಲಿ ಒಂದು ಸಣ್ಣ ಕೆರೆ ಇತ್ತು ಜಾಲಪ್ಪನವರೆ, ಆ ಕೆರೆಯಲ್ಲಿ ನಾವು ನೀರು ತೆಗೆದು ಗದ್ದೆಗೆಲ್ಲ ಹಾಕುವಂಥದ್ದು. ನೀರೆಲ್ಲ ಖಾಲಿ ಮಾಡಿದ ಮೇಲೆ ಒಳ್ಳೆಯ ಮೀನುಗಳು ಸಿಕ್ಕುತ್ತದೆ; ಆ ಕೆರೆಯಲ್ಲಿ. ಒಳ್ಳೆಯ ಮೀನುಗಳೆಂದರೆ ನಮ್ಮ ಜಿಲ್ಲೆಯವರಿಗೆಲ್ಲ ಗೊತ್ತಿದೆ. ಮಾನ್ಯ ವಸಂತಸಾಲಿಯಾನ ಅವರಿಗೆ ಗೊತ್ತು.

ಶ್ರೀ ವಾಟಾಳ್ ನಾಗರಾಜ್ :- ಯಾವ ಪಕ್ಷದ್ದು ಆ ಮೀನುಗಳು.

ಶ್ರೀ ಎಂ. ವೀರಪ್ಪ ಮೊಯಿಲಿ :- ಕೆಲವು ಬಹಳ ಒಳ್ಳೆಯ ಹೆಸರಿನ ಮೀನುಗಳಿವೆ. ಮಂಡಜಿ ಎಂದು ಇದೆ. ಮಂಡಜಿ ಮತ್ತು ಬಹಳ ಮೀನುಗಳ ಹೆಸರನ್ನು ಮರೆತುಬಿಟ್ಟಿದ್ದೇನೆ. ಅದು ಏನಾಯಿತು ಎಂದರೆ ಎಲ್ಲ ಮೀನುಗಳನ್ನು ಹಿಡಿಯಲಿಕ್ಕೆ ಹೋಗಿ ಮಂಡಜಿ ಎಂದರೆ ದೊಡ್ಡ ಮೀನು. ದೊಡ್ಡ ಮೀನು ಹಿಡಿಯಲಿಕ್ಕೆಹೋಗಿ ಏನಾಯಿತೆಂದರೆ, ಏನೋ ಒಂದು ಮೀನಿನ ಮೊಕ ಕಂಡೆ, ಅದಕ್ಕೆ ಕೈಹಾಕಿದೆ, ಕೈ ಹಾಕುವಾಗ ಅದು ಹಾವು. ಅದಕ್ಕೆ ಸಿಕ್ಕಿಹಾಕಿಕೊಂಡೆ. ಹಾಗೆ ನಿಮ್ಮ ಪರಿಸ್ಥಿತಿ ಆಗಬಾರದೆಂದು ನನ್ನ ವಿನಂತಿ. ಪ್ರಥಮವಾಗಿ. ಹೋಗಿ ಹೋಗಿ ಮೀನು ಹಿಡಿಯಲಿಕ್ಕೆ ಹೋಗಿ, ಹಾವು ಕೈಯನ್ನು ಕಚ್ಚಿ ಏನಾದರೂ ಅವಾಂತರ ಆದ ಹಾಗೆ ಮಾನ್ಯ ಯಡಿಯೂರಪ್ಪನವರಿಗೆ ಅಥವಾ ಬಿ.ಜೆ.ಪಿ. ಯವರಿಗೆ ದಯಮಾಡಿ ಆಗಬಾರದು. ನನ್ನ ಬಹಳ ಅಪೇಕ್ಷೆ. ಇಂದು ಶ್ರೀ ರಾಮನವಮಿ ದಿವಸ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಹಾವನ್ನುಹಿಡಿದು ಗಂಡಾಂತರ ಮಾಡಿಕೊಳ್ಳಬೇಕಾದಂಥ ಕೆಲಸವನ್ನು ಕರ್ನಾಟಕದಲ್ಲಿ ಮಾಡಬೇಡಿ. ಹೊರಗಡೆ ಏನಾದರೂ ಮಾಡಿಕೊಳ್ಳಿ. ಇಲ್ಲಿ ಆಗುವುದಿಲ್ಲ. ಕೊನೆಗೆ ನಿಮಗೆ ಸಿಕ್ಕುವುದು ಹಾವೆ. ಇನ್ನೇನು ಸಿಗುವುದಿಲ್ಲ. ಕರ್ನಾಟಕದ ಪರಿಸ್ಥಿತಿ ಹಾಗಾಗಿದೆ. ಕರ್ನಾಟಕದ ಮತದಾರರು ಯಾರು ಇದ್ದಾರೆ. ಒಳ್ಳೆಯ ಸುಸಂಸ್ಕೃತಿಯವರು ಈ ದೇಶದ ಒಂದು ಐಕ್ಯತೆಯಲ್ಲಿ, ದೇಶದ ಸುಭದ್ರತೆಯಲ್ಲಿ ಜಾತ್ಯಾತೀತದ ತತ್ವದಲ್ಲಿ ಬಹಳ ಫರ್ಮ್‌ಪೌಂಡೇಷನ್ ಇದೆ.

ಶ್ರೀ ವಾಟಾಳ್ ನಾಗರಾಜ್ :- ಸಿಓಡಿ ವರದಿಯಲ್ಲಿ ಇದೆಲ್ಲ ಇದೆಯೋ ಹೇಗೆ? ಅಲ್ಲಿ ವರದಿಯಲ್ಲಿ ಇದನ್ನೆಲ್ಲಾ ಹೇಳಿದ್ದಾರೋ ಅಂತ ತಾವು ವರದಿ ಮಂಡಿಸುತ್ತಿದ್ದೀರಿ. ಈ ವರದಿಯಲ್ಲಿ ಸಿಓಡಿಯವರು ಹೇಳಿದ್ದಾರೋ ಅಂತ.

ಶ್ರೀ ಎಂ. ವೀರಪ್ಪಮೊಯಿಲಿ :- ಇಲ್ಲಿಲ್ಲ, ಅದೇನೂ ಇಲ್ಲ. ಒಂದು ಗಂಟೆ ಚರ್ಚೆ ಆಯಿತಲ್ಲ ಅದನ್ನು ನೋಡಿದಾಗ, ನನ್ನ ಕೆಲವು ಅನಿಸಿಕೆಗಳನ್ನು ವ್ಯಕ್ತ ಪಡಿಸಿದ್ದೇನೆ. Let us not make politics in this issue. We would not like to meddle with that. ತಾವು ಮೆಡಲ್ ಮಾಡಬಾರದು. In the investigation, let the truth come out. ಆದ್ದರಿಂದ ನಾವು ಸಿಓಡಿಗೆ ಹಚ್ಚಿದ್ದೇವೆ. ಇದರಲ್ಲಿ ಯಾರನ್ನು ರಕ್ಷಣೆ ಮಾಡತಕ್ಕಂಥ ವಿಚಾರವಿಲ್ಲ. ಆದರೆ ತಾವು ಹೇಳಿದ್ದೀರಿ ಎಂದು ಹೇಳಿ ನಾವು

ಯಾರನ್ನಾದರೂ ಅಕ್ಯೂಸ್ ಮಾಡಲಿಕ್ಕೆ ಆಗುವುದಿಲ್ಲ. ಇದು ದಾಖಲೆಗೆ ಸಂಬಂಧಪಟ್ಟ ವಿಚಾರ. ಯಾರಾದರೂ ಒಬ್ಬರು ಇಂಥವರು ಹಣ ತೆಗೆದುಕೊಂಡರು ಎಂದು ಹೇಳುವುದು ಅಥವಾ ನಾವು ಹೇಳುವುದು, ನೀವು ಹೇಳಿದರು, ಇಂಥವರು ಹೇಳಿದರು ಎಂದು ಬಾಯಿ ಹೇಳಿಕೆಯಿಂದ ಇಂಥ ವ್ಯವಹಾರಗಳಲ್ಲಿ ಯಾರನ್ನೂ ತಪ್ಪಿತಸ್ಥರನ್ನಾಗಿ ಮಾಡವುದಕ್ಕಾಗುವುದಿಲ್ಲ. ಅಧಿಕಾರಸ್ಥರು ಇದ್ದಾರೆ ಯಾರು ಅಧಿಕಾರದಲ್ಲಿದ್ದರು, ಯಾರದ್ದು ಯಾವ ಪಾತ್ರ ಇದೆಯೆಂಬುದು ಇದೆ. ಆದರಿಂದ ಯಾರೂ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಪಾತ್ರ ಇಲ್ಲದಿದ್ದರೆ ನಾವು ಅವರನ್ನು ಸೇರಿಕೊಳ್ಳುವುದಕ್ಕಾಗುವುದಿಲ್ಲ. ಈಗ ತಾತ್ಕಾಲಿಕವಾದ ವರದಿ ಸಿಓಡಿಯದು ನಮಗೆ ಬಂದಿದೆ. ಅದರ ಆಧಾರದ ಮೇಲೆ ಕೆಲವು ಅಂಶಗಳನ್ನು ಈ ಸದನಕ್ಕೆ ತಿಳಿಸಬೇಕಾಗಿದೆ. We dont want to suppress anything in this House .

ಏಕೆಂದರೆ ಈ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಊಹಾಪೋಹಗಳು ಬಂದಿವೆ. ತಾವು ವಿಚಾರ ಎತ್ತಿದ್ದೀರಿ, ಇದೆಲ್ಲಾ ಬಂದಿದೆ. ಸಿಓಡಿಯವರು ಸಾಧಾರಣ 3 ತರಹದ ಅವ್ಯವಹಾರಗಳು ನಡೆದಿವೆ ಎಂದು ಪ್ರಾಸ್ತಾವಿಕವಾಗಿ ಅವರ ವರದಿಯಲ್ಲಿ ತಿಳಿಸಿದ್ದಾರೆ. ಮಲೆನಾಡು ಕನೆಸ್ಟ್ರಕ್ಷನ್ ಕಂಪನಿ ಮತ್ತು ತಿರುಮಲ ಕನ್‌ಸ್ಟ್ರಕ್ಷನ್ ಕಂಪನಿಯವರು ಸುಮಾರು 5 ಕೋಟಿ 316 ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೇವಲ ಕಾರ್ಯ ನಿರ್ವಾಹಕ ಅಭಿಯಂತರರ ಮತ್ತು ಮುಖ್ಯ ಅಭಿಯಂತರರ ಪತ್ರಗಳ ಆಧಾರದ ಮೇಲೆ ಕೊಟ್ಟಿರುತ್ತಾರೆ. ಅದರ ಬಗ್ಗೆ ವಿಚಾರಣೆ ಮಾಡಿದಾಗ ಈ ಎರಡು ಸಂಸ್ಥೆಗಳಲ್ಲಿ ಕಾರ್ಯ ನಿರ್ವಾಹಕ ಅಭಿಯಂತರು, ಶಿವಮೊಗ್ಗ, ಇವರು ತಮ್ಮ ಪತ್ರದಲ್ಲಿ ಹೇಳಿದ ಹಾಗೆ ಅಲ್ಲಿ ದಾಸ್ತಾನು, ಇವರು ಹಣ ಕೊಟ್ಟಿದ್ದ ದಿವಸ ಇರಲಿಲ್ಲ. There was no stock according to the reports.

ದಿನಾಂಕ 27-1-93 ರಂದು 2 ಕೋಟಿ 25 ಲಕ್ಷದಷ್ಟು ಸಾಮಗ್ರಿಗಳು ಇದ್ದದ್ದೂ ಮಾತ್ರ ಕಂಡು ಬರುತ್ತದೆ. ಎರಡನೇಯ ತರಹದ ಅವ್ಯವಹಾರ ಏನೆಂದರೆ, ನಕಲಿ ಕಾಗದ ಪತ್ರಗಳ ಆಧಾರದ ಮೇಲೆ ಮುಂಗಡ ಹಣ ತೆಗೆದುಕೊಳ್ಳುವ ಪ್ರಯತ್ನ ಮಾಡಿ 5 ನಕಲಿ ಬ್ಯಾಂಕ್ ಗ್ಯಾರಂಟಿಗಳನ್ನು (ಸುಮಾರು 3 ಕೋಟಿ 50 ಲಕ್ಷ ರೂಪಾಯಿಗಳ ಮೊತ್ತವು ಕೆಳಕಂಡ ತಾರೀಖಿನಂದು ಗುತ್ತಿಗೆದಾರರು ಕರ್ನಾಟಕ ಗೃಹ ಮಂಡಳಿಯವರಿಗೆ ಕೊಟ್ಟಿರುತ್ತಾರೆ. ಅದು ಫೋರ್ಜ್ಡ್ ಬ್ಯಾಂಕ್ ಗ್ಯಾರಂಟಿ. ಅದು ಯಾವುದೆಂದರೆ 1. ಎ. ಈಶ್ವರಪ್ಪ, ಭದ್ರಾವತಿ, ಶಿವಮೊಗ್ಗ -ತಾರೀಖು 15-9-92-40,24,500 ರೂಪಾಯಿಗಳು. 2. ಸುರೇಶ್ ಪೈ 15-9-92-34, 19,000 ರೂಪಾಯಿಗಳು. 3. ಮೆಸರ್ಸ್ ಜೆರಾಲ್ಡ್ ಮೆಟಲ್ ಕೈಗಾರಿಕೆ-15-9-92-93,96,750 ರೂಪಾಯಿಗಳು. 4.ಮೆಸರ್ಸ್ ಅನುರಾಧಾ ಎಸ್ಟೇಟ್ - 15-9-92-33,70,000 ರೂಪಾಯಿಗಳು. 5. ಮೆಸರ್ಸ್ ನಾಗಾರ್ಜುನ ಎಸ್.ಎಲ್.ಬಿ. ಲಿಮಿಟೆಡ್ - 15-9-92- 1,40,12,000 ರೂಪಾಯಿಗಳು. ಮತ್ತೊಂದು ತರಹದ ಅವ್ಯವಹಾರ ಏನೆಂದರೆ ನಕಲಿ-ಸುಳ್ಳು ಮತ್ತು ಸೃಷ್ಟಿಸಿದ ಓಚರ್ ಆಧಾರದ ಮೇಲೆ ಹಣ ಪಡೆದಿರುವುದು. ವಿಚಾರಣೆಯಲ್ಲಿ ಕಂಡುಬಂದದ್ದು ಏನೆಂದರೆ ಮಹಮದ್ ಶೇಕ್, ಗುತ್ತಿಗೆದಾರ, 9 ವಿಧಾನಸಭಾಕ್ಷೇತ್ರಗಳಿಗೆ ಬೆಳಗಾಂ ಜಿಲ್ಲೆಯಲ್ಲಿ 10,373 ಮನೆಗಳನ್ನು ಕಟ್ಟಲು ಸುಳ್ಳು ದಾಖಲೆ ಮೇಲೆ 53.25ಲಕ್ಷ ರೂಪಾಯಿಗಳನ್ನು 5-8-92ರಂದು ಪಡೆದಿರುತ್ತಾರೆ. ಇದೇ 3 ತರಹದ ವ್ಯವಹಾರಗಳು ಈ ಸಂದರ್ಭದಲ್ಲಿ ಈ ಕೆಳಕಂಡವನ್ನು ಸಿಓಡಿಯವರು ದಿನಾಂಕ 27-3-93,28-3-93, 29-3-93 ಮತ್ತು 30-3-93 ರಂದು ಬಂಧಿಸಿರುತ್ತಾರೆ.

| | |
|---|---|
| ಗೋಪಾಲಕೃಷ್ಣ, ಮುಖ್ಯ ಅಭಿಯಂತರು(ನಿ) | 27-3-93. |
| ಸಿ. ಎ. ಲಕ್ಷ್ಮಣ ರಾವ್, ಕಾರ್ಯನಿರ್ವಾಹಕ ಅಭಿಯಂತರು | 27-3-93 |
| ಎಂ. ಎಂ. ಸದಾಶಿವಯ್ಯ , ನಿವೃತ್ತ ಕಂಟ್ರೋಲರ್(ಆರ್ಥಿಕ) | 28-3-93 |
| ಜಿ. ಎಸ್. ನಾಗರಾಜ, ಗುತ್ತಿಗೆದಾರ | 29-3-93 |
| ಕಾರ್ತಿಕೇಯನ್, ಜೆರಾಲ್ಡ್ ಮೆಟಲ್ ಕೈಗಾರಿಕೆ, ಬೆಂಗಳೂರು | 28-3-93 |

| | |
|---|---|
| ಕೇಶವ, ಜೆರಾಲ್ಡ್ ಮೆಟಲ್ ಕೈಗಾರಿಕೆ, ಬೆಂಗಳೂರು | 28-3-93 |
| ಸಿ. ಆರ್. ನಾಗರಾಜ್, ವ್ಯಾಪಾರಿಗಳು, ವಿ.ವಿ.ಪುರಂ, ಬೆಂಗಳೂರು | 28-3-93 |
| ಕೆ. ಪಿ. ಚಂದ್ರಶೇಖರ್, ವಿಶೇಷ ಸಹಾಯಕ, ಯೂಕೋ ಬ್ಯಾಂಕ್, ಕೋರಮಂಗಲ, ಬೆಂಗಳೂರು | 28-3-93 |
| ಎಸ್. ಆರ್. ನಂಜುಂಡಸ್ವಾಮಿ, ವ್ಯಾಪಾರಿಗಳು, ಬೆಂಗಳೂರು | 28-3-93 |
| ಸುಭಾಷ್ ಪೈ, ಉತ್ತರ ಕನ್ನಡ | 28-3-93 |
| ಡಾ . ಸತ್ಯನಾರಾಯಣ ಮೆ: ನಾಗಾರ್ಜುನ ಎಸ್‌ಎಲ್‌ಐಬಿ. ಲಿ ., ಮತ್ತು ಅನುರಾಧ ಎಸ್ಟೇಟ್, ಹೈದರಾಬಾದ್ | 28-3-93 |
| ಮಹಮದ್ ಶೇಖ್, ಗುತ್ತಿಗೆದಾರ | 30-3-93 |
| ಫಕೀರಪ್ಪ ಭೀಮಪ್ಪ, ಎಕ್ಸಿಕ್ಯೂಟೀವ್ ಇಂಜಿನಿಯರ, ಬೆಳಗಾಂ | 30-3-93 |

ಈ ಮೇಲ್ಕಂಡ ವ್ಯವಹಾರಗಳಲ್ಲಿ ಇವರೆಲ್ಲರ ಪಾತ್ರವೇನು ಎಂಬ ಬಗ್ಗೆ ಸಿಓಡಿ ತನಿಖೆ ಮುಂದುವರೆದಿದೆ

ಇದುವರೆಗೆ ಸಿಕ್ಕಿದಂತಹ ಮಾಹಿತಿ ಪ್ರಕಾರ ಆ ವರದಿ ಇದೆ. ಇಷ್ಟು ಅಂಶಗಳನ್ನೊಳಗೊಂಡಂತೆ ಸಿಓಡಿ ವರದಿಯಲ್ಲಿ ಬಂದಿದೆ. ತಾವೇನು ಕಾಗೋಡು ತಿಮ್ಮಪ್ಪನವರ ಹೆಸರನ್ನು ಹೇಳಿದ್ದೀರಿ ಸಿಓಡಿ ವರದಿ ಪ್ರಕಾರ ಇವತ್ತಿನವರೆಗೆ ಅವರ ಇನ್‌ವಾಲ್ವ್‌ಮೆಂಟ್ ಎಲ್ಲೂ ಕಾಣಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ :- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಅಧಿಕಾರಿಗಳನ್ನು ಆರೆಸ್ಟ್ ಮಾಡಿದ್ದಾರೆಂದು ಹೇಳಿದ್ದಾರೆ. ಅವರನ್ನು ಸಸ್ಪೆಂಡ್ ಮಾಡುವುದೇ ಅಥವಾ ತಾವು ಏನು ಕ್ರಮ ತೆಗೆದುಕೊಳ್ಳಬೇಕು ಅದರ ಬಗ್ಗೆ ತಾವೇನು ಮಾಡಿದ್ದೀರಿ ಅದನ್ನು ಹೇಳಿ.

ಶ್ರೀ ಪಿ. ಜಿ. ಆರ್ ಸಿಂಧ್ಯ :-ಅವೊತ್ತು ಇದ್ದಂತಹ ಕಮಿಷನರ್ ಐಎಎಸ್ ಅಧಿಕಾರಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿದ್ದೇನೆ. ಮೇಲ್ನೋಟಕ್ಕೆ ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಕನ್ವಿನ್ಸ್ ಆಗಿದೆ. ಕ್ಯಾಬಿನೆಟ್ ಡಿಸೀಷನ್ ಅನ್ನು ಕಮಿಷನರ್ ಫ್ಲೋಟ್ ಮಾಡಿದ್ದಾರೆ. Commissioner is an Executive of the Housing Board. ಅವರ ಮೇಲೆ ತಾವೇನು ಕ್ರಮ ತೆಗೆದು ಕೊಳ್ಳುತ್ತೀರಿ ಈಗ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಅವೊತ್ತಿನ ಗೃಹ ಮಂಡಳಿಯ ಅಧ್ಯಕ್ಷರು ಕಾನೂನು ಬಾಹಿರವಾಗಿ ಬೋರ್ಡ್ ರೆಸಲ್ಯೂಷನ್ ಮಾಡದೆ ಟೆಂಡರ್ ಕರೆಯದೆ ಕಾನೂನಿನ ಚೌಕಟ್ಟಿನೊಳಗೆ ವ್ಯವಹಾರ ಮಾಡದೆ ಗುತ್ತಿಗೆದಾರರಿಗೆ ಅಡ್ವಾನ್ಸ್ ಕೊಡಿಸಿದ್ದು ಅಕ್ಷಮ್ಯ ಅಪರಾಧವಲ್ಲವೆ ? ನನ್ನ ಹತ್ತಿರ ದಾಖಲೆಗಳಿವೆ. ನಾನು ನಿಮಗೆ ಕಳುಹಿಸಿ ಕೊಡುತ್ತೇನೆ. ಅವೊತ್ತಿನ ಕಾರ್ಯದರ್ಶಿಯವರಿಗೆ ಬೋರ್ಡ್ ರೆಸಲ್ಯೂಷನ್ ಇಲ್ಲದೆ ಶಿವಮೊಗ್ಗದ ಮತ್ತು ಬೆಳಗಾಂ ಜಿಲ್ಲೆಗಳ ಕಂಟ್ರಾಕ್ಟರುಗಳಿಗೆ ದುಡ್ಡು ಕೊಡಬೇಕೆಂದು ಗೃಹಮಂಡಳಿಯ ಅಧ್ಯಕ್ಷರು ಕಾಗೋಡು ತಿಮ್ಮಪ್ಪನವರು ಆದೇಶ ಕೊಟ್ಟಿರುವ ದಾಖಲೆ ನನ್ನ ಹತ್ತಿರವಿದೆ. ಗೃಹಮಂಡಲಿಯ ಅಧ್ಯಕ್ಷರು ಅಲ್ಲಿ ಅವ್ಯವಹಾರಗಳು ಆಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಇರಲಿಲ್ಲವೆ ? ಮೊಹಮದ್‌ಸೇಠ್ ಬೆಳಗಾಂ ಅವರು ಕಮಿಷನ್ ರೂಪದಲ್ಲಿ 2 ಲಕ್ಷ ರೂಪಾಯಿಗಳನ್ನು ಗೃಹಮಂಡಳಿಯ ಅಧ್ಯಕ್ಷರಿಗೆ ಕೊಟ್ಟಿದ್ದೇನೆಂದು ಹೇಳಿದ್ದಾರೆ. ಅದು ಸಿಓಡಿ ರಿಪೋರ್ಟ್‌ನಲ್ಲಿದೆಯೆಂದು ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ಈ ತರಹ ಸಿಓಡಿಯ ಅಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆ. ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ನಿಮ್ಮ ಹತ್ತಿರ ವರದಿ ಇಲ್ಲವೆ ? ಅಥವಾ ಪತ್ರಿಕೆಯಲ್ಲಿ ಬಂದಿರುವುದು ಸಿಓಡಿಯವರು

ಹೇಳಿಕೆ ಕೊಟ್ಟಿರುವುದು ಸರಿಯಲ್ಲವೇ ? ಒಬ್ಬ ಜವಾಬ್ದಾರಿಯ ಗೃಹಮಂಡಳಿಯ ಅಧ್ಯಕ್ಷರು ಈವೊಂದು ಅವ್ಯವಹಾರ ಆಗದಂತೆ ನೋಡಿಕೊಳ್ಳಬೇಕಾಗಿತ್ತು. ಇವರೇ ಕುಮ್ಮಕ್ಕು ಕೊಟ್ಟು ಈ ವ್ಯವಹಾರ ಮಾಡಿರಬೇಕಾದರೆ ಸಿಓಡಿ ರಿಪೋರ್ಟ್‌ನ ಒಂದು ಕಾನೂನು ಚೌಕಟ್ಟಿನೊಳಗೆ ಅವರನ್ನು ಅರೆಸ್ಟ್ ಮಾಡಿ ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಳ್ಳುವುದು ಬೇಡವೆ ? ತಾವೇನು ಹೇಳಿದ್ದೀರಿ, ಈವೊಂದು ವ್ಯವಹಾರ ನಡೆದಿದೆ ಸಿಓಡಿಯವರು ಒಪ್ಪಿಕೊಂಡಿದ್ದಾರೆ. ಆ ವರದಿ ಪ್ರಕಾರ ನನ್ನ ಹತ್ತಿರ ದಾಖಲೆಗಳು ಇವೆ. ಮನೆಗಳನ್ನು ಹಂಚುವಾಗ ಮತ್ತು ಸೈಟುಗಳನ್ನು ಹಂಚುವಾಗ ನೂರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆದಿದೆ. ನಾನು ದಾಖಲೆಗಳನ್ನು ಕೊಡುತ್ತೇನೆ ಅದರ ಆಧಾರದ ಮೇಲೆ ಸಮಗ್ರವಾದ ತನಿಖೆಯನ್ನು ನಡೆಸುವುದಕ್ಕೆ ತಾವು ತಯಾರಾಗಿದ್ದೀರಾ ?

ಶ್ರೀ . ಆರ್. ವಿ. ದೇಶಪಾಂಡೆ :- ಸಿಓಡಿಯಲ್ಲಿ ನಮಗೆ ಇಂಟರ್‌ಫಿಯರ್ ಆಗುವ ಇಚ್ಛೆ ಇಲ್ಲ. ಏಕೆಂದರೆ ತನಿಖೆ ನಡೆಯುತ್ತದೆ, ಅದು ಕಾಯಿದೆಬದ್ಧವಾಗಿ ನಡೆಯಬೇಕಾಗುತ್ತದೆ. ಇದರಲ್ಲಿ ಇಂಟ್‌ಫಿಯರ್ ಆಗಿ ಅದನ್ನು ಡೈವರ್ಟ್ ಮಾಡುವುದಕ್ಕೆ ನಮಗೆ ಇಂಟರೆಸ್ಟ್ ಇಲ್ಲ. ಆದರೆ ತಮ್ಮ ಕಡೆಯಿಂದ ನಮಗೆ ಭರವಸೆ ಕ್ಲಿಯರ್ ಆಗ ಬೇಕಾಗಿದೆ, ಇವತ್ತು ಪತ್ರಿಕೆಗಳಲ್ಲಿ ಬಂದಿರಬಹುದು. ಮುಂದೆ ಸರ್ಕಾರ ಯಾವ ರೀತಿಯ ಎನ್‌ಕ್ವೈಯರಿ ಮಾಡಲಿ ಅದರಲ್ಲಿ ನಾವು ಇಂಟರ್‌ಫಿಯರ್ ಮಾಡುವುದಿಲ್ಲ. ಸರ್ಕಾರದಿಂದ ಸ್ಪಷ್ಟವಾದ ಭರವಸೆ ಬರಬೇಕಾಗುತ್ತದೆ. ಅಧಿಕಾರಿಗಳನ್ನು ಅರೆಸ್ಟ್ ಮಾಡಿದ್ದಾರೆ. ಕಂಟ್ರಾಕ್ಟರುಗಳ ಕಡೆಯಿಂದ ಹಣವನ್ನು ವಸೂಲಿ ಮಾಡುವ ಕ್ರಮವನ್ನು ತಾವು ತೆಗೆದುಕೊಳ್ಳಬಹುದು, ಆಫೀಸರುಗಳನ್ನು ತಾವೇನು ಅರೆಸ್ಟ್ ಮಾಡಿದ್ದೀರಿ ಅವರನ್ನು ಏಕೆ ಸಸ್ಪೆಂಡ್ ಮಾಡಲಿಲ್ಲ? 27-28ನೇ ತಾರೀಖಿಗೆ ನಿಮಗೆ ವರದಿ ಬಂದಿದೆ. ಏಕೆ ಇನ್ನು ನೀವು ಆ ಆಫೀಸರುಗಳನ್ನು ಸಸ್ಪೆಂಡ್ ಮಾಡಲಿಲ್ಲ? 23-24ಕೋಟಿ ರೂಪಾಯಿ ಇವತ್ತು ನೀವು ಕಂಟ್ರಾಕ್ಟರುಗಳಿಗೆ ಹಂಚಿದ್ದೀರಿ ಒಂದು ಕಡೆ ಅರೆಸ್ಟ್ ಆಯಿತು, ಒಂದು ಕಡೆ ಕ್ರಮ ಆಯಿತು, ಹಣ ಪುನಃ ಪಬ್ಲಿಕ್ ಎಕ್ಸ್‌ಚೆಕ್ಕರ್ ವಾಪಸು ಬರಲಿಕ್ಕೆ ಆ ಹಣವನ್ನು ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :-ತಾವು ಉತ್ತರ ಕೊಡಿ ನಾನು ಈಗಲೇ ದಾಖಲೆಗಳನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಲಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಆಗ ಕಮಿಷನ್ ಯಾರಿದ್ದರು ಎಂದು ಕೇಳಿದ್ದಾರೆ, ಅಗರ್‌ವಾಲ್ ಎಂಬುವರು ಹೌಸಿಂಗ್ ಕಮಿಷನರ್ ಆಗಿದ್ದರು, ಈಗ ತಾತ್ಕಾಲಿಕ ವರದಿ ಸಿಓಡಿಯಿಂದ ಬಂದಿದೆ. ಮಾನ್ಯ ದೇಶಪಾಂಡೆಯವರು ಹೇಳಿದ ಪ್ರಕಾರ ನಾನು ಪುನರುಚ್ಚಾರ ಮಾಡಲಿಕ್ಕೆ ಇಚ್ಛೆ ಪಡುತ್ತೇನೆ. ಈಗ ತಾವು ಯಾವುದೇ ಪ್ರಶ್ನೆ ಕೇಳಿದರೂ ಕೂಡ I am not in a position to answer except on the basis of the COD report. ನಾನು ಏನಾದರೂ ಹೇಳಿದರೆ that will be a pointer to the COD. ಏಕೆಂದರೆ ಸಿಓಡಿ ತನಿಖೆಗೆ ಪ್ರಭಾವ ಬೀಳಬಹುದು. ಅಥವಾ ಸಿಓಡಿ ತನಿಖೆಗೆ ಅಘಾತ:ಾಗಬಹುದು. ಆದ್ದರಿಂದ ತಮ್ಮ ಹತ್ತಿರ ಮಾಹಿತಿ ಯಾವುದಾದರೂ ಇದ್ದರೆ ಕಳುಹಿಸಿಕೊಡಿ. ಆಶ್ರಯ ಕಮಿಟಿಗಳಿಗೆ ಸಂಬಂಧಪಟ್ಟಂತಹ ವಿಚಾರಗಳನ್ನು ಅದು ಸಿಓಡಿಯಲ್ಲಿದೆ. ತಾವು ಎಲ್ಲಾ ಮಾಹಿತಿಗಳನ್ನು ಕೊಟ್ಟರೆ ಏನು ತನಿಖೆ, ಯಾವ ಸ್ವರೂಪದಲ್ಲಿ ಮಾಡಬೇಕೋ ಅದನ್ನು ಮಾಡುತ್ತೇವೆ. ಆದರೆ ಆಶ್ರಯ ಕಂಟ್ರಾಕ್ಟ್‌ಗೆ ಸಂಬಂಧಪಟ್ಟಂಥ ವಿಚಾರಗಳನ್ನು ಇವತ್ತು ಸಿಓಡಿಗೆ ಕೊಟ್ಟಿದ್ದೇವೆ. ಆದ್ದರಿಂದ ಅವರು ಯಾರನ್ನು ಅರೆಸ್ಟ್ ಮಾಡಬೇಕು, ಎಲ್ಲಿ ಮಾಹಿತಿ ಸಿಕ್ಕಿದೆ ಅದೆಲ್ಲ ಅವರಿಗೆ ಬಿಟ್ಟಿದ್ದು. It is left to them because I cannot give direction to arrest this man or that man. If they found that Agarwal should be arrested we are not coming in the way.

ಒಂದು ವಿಚಾರದ ಬಗ್ಗೆ ನಾನು ಈ ಸದನಕ್ಕೆ ಆಶ್ವಾಸನೆ ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. We are not going to interfere in any of the affairs of COD. It is for them to investigate into the matter. ಆದ್ದರಿಂದ ಮಾಹಿತಿ ಇದ್ದರೆ ಖಂಡಿತವಾಗಿಯೂ ಕೊಡಿ.

ಶ್ರೀ ಬಿ. ಎಸ್.ಯಡಿಯೂರಪ್ಪ:- ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಅದು ತಾತ್ಕಲಿಕ ವರದಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಏಕೆ ನೀವೂ ಪೂರ್ತಿ ವರದಿಯನ್ನು ಇಲ್ಲಿ ಇಡುತ್ತಾ ಇಲ್ಲ? ನಿಮ್ಮ ಪಕ್ಷದ ಸದಸ್ಯರನ್ನು ಉಳಿಸುವುದಕ್ಕೋಸ್ಕರ, ನೀವು ಅವರಿಗೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದೀರಿ ಎಂದು ನಾನು ಹೇಳಬೇಕೇ? ಕಂಪ್ಲೀಟ್ ಇಂಟರೀಮ್ ರಿಪೋರ್ಟನ್ನು ಟೇಬಲ್ ಮಾಡಿ ಸ್ವಾಮಿ. ರಿಪೋರ್ಟ್‌ನ್ನು ಟೇಬಲ್ ಮಾಡಿ ಎಂದು ಕೇಳುವುದಕ್ಕೆ ನನಗೆ ಅಧಿಕಾರ ಇಲ್ಲವೇನು? ಟೇಬಲ್ ಮಾಡಿ ಎಂದರೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದೀರಿ ಅಥವಾ ವರದಿಯನ್ನು ತಿರುಚಬೇಕೆಂದು ಹೊರಟಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಜನ ನಿರ್ಣಯ ಮಾಡುತ್ತಾರೆ. ಈ ತರಹ ತಾವು ಮಾತನಾಡಿಕೊಂಡು ಆಗತಕ್ಕಂಥ ಸಿಓಡಿ ಎನ್‌ಕ್ವೈಯರಿಯನ್ನು ಮಾಡತಕ್ಕಂಥ ರಾಜಕೀಯ ಮಾಡುತ್ತೀರಲ್ಲ, ಇದರಿಂದ ತನಿಖೆಗೆ ತೊಂದರೆಯಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಕಾಗೋಡು ತಿಮ್ಮಪ್ಪ ಅವರನ್ನು ನಿಮ್ಮ ಮನೆಯಲ್ಲಿಟ್ಟುಕೊಂಡು ಇಂಟರೀಮ್ ರಿಪೋರ್ಟ್‌ನ್ನು ತಿರುಚಿ ನೀವು ಶಾಮೀಲಾಗುವಂಥ ಪ್ರಯತ್ನ ಮಾಡಬೇಡಿ. ಇದೇ ರೀತಿ ನೀವು ಮುಂದುವರೆದರೆ ಖಂಡಿತ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಅವರು ಒಬ್ಬ ಅಧ್ಯಕ್ಷರಾಗಿ ಈ ಅವ್ಯವಹಾರ ನಡೆಯುವುದಕ್ಕೆ ಪ್ರಮುಖ ಪಾತ್ರಧಾರಿಯಾಗಿದ್ದಾರೆ. ಆ ನಿರಪರಾಧಿ, ಒಂದು ಲಕ್ಷ ರೂಪಾಯಿ ತಿಂದ ಅಧಿಕಾರಿಯನ್ನು ಆರೆಸ್ಟ್ ಮಾಡಿಸುತ್ತೀರಿ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ ಈ ಅವ್ಯವಹಾರಕ್ಕೆ ಮೂಲ ಕಾರಣಕರ್ತರಾದ ಗೃಹಮಂಡಳಿ ಅಧ್ಯಕ್ಷರ ಮೇಲೆ ಕ್ರಮ ತೆಗೆದುಕೊಳ್ಳದೆ, ಇವತ್ತು ಅವರಿಗೆ ರಕ್ಷಣೆ ನೀಡುತ್ತಿದ್ದೀರಿ.

Sri. M. Veerappa Moily : I am on my leg I have not yielded.

ಶ್ರೀ ಬಿ.ಎಸ್.ಯಡಿಯೂರಪ್ಪ :-ನೀವು ದುಡ್ಡು ಕೊಡಿ ಅಂತ ಕಂಟ್ರಾಕ್ಟರಿಗೆ ಆಜ್ಞೆ ಮಾಡಿರುವಂಥಾದ್ದು, ನನ್ನಲ್ಲಿ ದಾಖಲೆ ಇದೆ.

ಅಧ್ಯಕ್ಷರು :- ನೀವು ದಾಖಲೆಗಳನ್ನು ಕೊಟ್ಟು ಕಳಿಸಿರಿ.

ಶ್ರೀ ಆರ್. ವಿ. ದೇಶಪಾಂಡೆ :- ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನಾವು ಕೆಲವು ಪಾಯಿಂಟ್ಸ್‌ನ್ನು ರೈಸ್ ಮಾಡಿದ್ದೇವೆ. Let us hear him. We want asnwer from him.

ಶ್ರೀ ಎಂ. ವೀರಪ್ಪ ಮೊಯಿಲಿ :- ಅಧ್ಯಕ್ಷರೇ, ನಾನು ಒಂದು ಗಂಟೆ ಕಾಲ ಬಹಳ ಸಮಾಧಾನದಿಂದ ಈ ಸೀಟಿನಲ್ಲಿ ಕುಳಿತುಕೊಂಡು, ಒಂದು ಶಬ್ದವನ್ನೂ ಆಡದೆ ಸುಮ್ಮನೆ ಇದ್ದೇನೆ. ಏನೇನೋ ಮಾತನಾಡಿ ತಾವು, ನೀವು ಸ್ವಲ್ಪ ಬುದ್ಧಿವಂತರಾಗಿದ್ದರೆ ಸ್ವಲ್ಪ ದಾರಿಗೆ ಬರುತ್ತಿದ್ದಿರಿ. ನೀವು ಈ ಬುದ್ಧಿವಂತಿಕೆಯಿಂದ ಸರಿದಾರಿಗೆ ಬಾರದಿದ್ದರೆ ನಿಮ್ಮನ್ನು ಶ್ರೀ ರಾಮನೇ ರಕ್ಷಿಸಬೇಕು. ಬೇರೆ ಯಾರೂ ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :- ಭಕ್ಷಣೆ ಮಾಡಲಿಕ್ಕೆ ಹೊರಟಿರುವವರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ. ಕಾನೂನು ಬಾಹಿರವಾಗಿ ..........

ಶ್ರೀ ಎಂ. ವೀರಪ್ಪ ಮೊಯಿಲಿ :-ಸನ್ಮಾನ್ಯ ಅಧ್ಯಕ್ಷರೇ, I am on my Legs ಹೆಚ್ಚು ಬೇಡ, ಕನಿಷ್ಟಪಕ್ಷ ಈ ಸದನಕ್ಕಾದರೂ ಸಜ್ಜನಿಕೆ ತೋರಿಸಬೇಕಲ್ಲ? ನಿಮಗೆ ಸಜ್ಜನಿಕೆ ಬೇಕಿಲ್ಲ. ಬಹಳ ಆತುರ. ಅಧಿಕಾರಪೀಠ ವಹಿಸಿಕೊಳ್ಳುವುದಕ್ಕೆ ನಿಮಗೆ ಇರತಕ್ಕಂಥ ದುರಾಸೆ ಏನಿದೆ, ಇದೇ ದುರಾಸೆ ನಿಮ್ಮನ್ನು ಕೆಡಿಸುತ್ತದೆ. ದುರಾಸೆ ಬೇಡ, ಕ್ರಮವಾಗಿ ಹೋಗಿ. ಸ್ವಲ್ಪ ಶಿಷ್ಟಾಚಾರ, ಸ್ವಲ್ಪ ಸಜ್ಜನಿಕೆ, ಇದನ್ನ ಇಟ್ಟುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅವ್ಯವಹಾರ ಮಾಡಿದಾಗ ಸಜ್ಜನಿಕೆ ಇತ್ತೇನು? 20 ಕೋಟಿ ರೂಪಾಯಿಗಳನ್ನು ಬೇಕಾದವರಿಗೆ ಕೊಟ್ಟರೆ ಅದು ಸಜ್ಜನಿಕೆ ಏನು?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :-ನಿಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ನೀವು ಅದರ ಮೇಲೆ ಕ್ರಮ ತೆಗೆದುಕೊಂಡರೆ, ಇರತಕ್ಕ ಬೆಂಬಲ ಹೋಗಿ, ಅಧಿಕಾರ ಹೋಗುತ್ತದೆ ಎಂಬ ಭಯ ಬೇಡ. ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಜೊತೆ ನಾವೂ ಇದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ನಂಬಿ ಬಂಗಾರಪ್ಪನವರು ಕೆಟ್ಟರು, ಹಾಗೆಯೇ ನೀವೂ ಕೆಡಬಾರದೆಂಬುದು ನಮ್ಮ ಉದ್ದೇಶ. ನೀವು, ನಮ್ಮ ತಲೆ ಮೇಲೆ ಕಲ್ಲು ಹಾಕಿಸಿಕೊಳ್ಳುತ್ತೇವೆ ಎಂದು ಹೇಳಿದರೆ, ಹಾಕಿಸಿಕೊಳ್ಳಿ ನಾವೇನು ಮಾಡುವುದಕ್ಕಾಗುತ್ತದೆ.

(ಗೊಂದಲ)

ಶ್ರೀ ಎಂ ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ, ಹಿರಿಯರು ಹೇಳಿದ್ದನ್ನು ನಾವೆಲ್ಲರೂ ಕೇಳಿದ್ದೇವೆ. ಸ್ವರ್ಗಕ್ಕೆ ಹೋಗಬೇಕಾದರೆ, ಮೆಟ್ಟಿಲು, ಮೆಟ್ಟಿಲು ಹತ್ತಿ ಹೋಗಬೇಕು. ಅದೇ ನರಕಕ್ಕೆ ಹೋಗಬೇಕಾದರೆ, ಮೆಟ್ಟಿಲು ಹತ್ತಬೇಕಾಗಿಲ್ಲ, ದೊಪ್ಪನೆ ಬೀಳುತ್ತಾರೆ. ನಿಮ್ಮ ಪರಿಸ್ಥಿತಿ ನರಕಕ್ಕೆ ಹೋಗತಕ್ಕ ಪರಿಸ್ಥಿತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್ :- ಸ್ವರ್ಗ ಇದೆಯೆಂದು ತಾವು ನಂಬಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:- ಸ್ವರ್ಗ ಇದೆಯೋ ಅಥವಾ ಇಲ್ಲವೋ ಎಂಬುದು ಅವರಿಗೆ ಗೊತ್ತಿದೆ, ಸ್ವರ್ಗದ ಕೀ ಅವರ ಹತ್ತಿರವೇ ಇದೆ. ಏಕೆಂದರೆ, ಇವತ್ತು ಜನ ನೋಡುತ್ತಾರೆ. ಪ್ರಾಮಾಣಿಕವಾಗಿ ಸಿಓಡಿ ವಿಚಾರ ಮಾಡುತ್ತಾರ I don't want to meddle with that .......ಇದಕ್ಕೆ ಯಾರನ್ನು ಅರೆಸ್ಟ್ ಮಾಡಬೇಕು. ಇವರು ಹೇಳಿದ ಕೂಡಲೇ ಮಾಡುವುದಕ್ಕಾಗುತ್ತದೆಯೇ? ಅವರು ಪಟ್ಟಿ ಕೊಡಲಿ, ಅವರಿಗೇ ವಿಚಾರಣೆಗೆ ಕೊಡೋಣ. ಸಿಓಡಿ ಗೆ ಏಕೆ? ಯಡಿಯೂರಪ್ಪನವರ ತನಿಖಾ ಸಮಿತಿ ಎಂದು, ಇವರಿಗೇ ಕೊಟ್ಟರೆ, ಇವರು ಎಲ್ಲರನ್ನೂ ಹ್ಯಾಂಗ್ ಮಾಡುತ್ತಾರೆ. ಅವರು ಏನು ತಿಳಿದುಕೊಂಡಿದ್ದಾರೆಂದರೆ, ಶಿವಮೊಗ್ಗದಲ್ಲಿ ಎಲ್ಲರನ್ನೂ ಜೈಲಿಗೆ ಕಳುಹಿಸಿ, ನಾವು ಅಧಿಕಾರಕ್ಕೆ ಬಹಳ ಬೇಗ ಬರುತ್ತೇವೆಂದು ತಿಳಿದುಕೊಂಡಿದ್ದಾರೆ. ಇದು ಅಷ್ಟು ಸುಲಭವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾವು ಅಧಿಕಾರಕ್ಕೆ ಬರುತ್ತೇವೆಂದು ಹೇಳುತ್ತಿಲ್ಲ. ನೀವೇ ಅಧಿಕಾರದಲ್ಲಿ ಇರಿ..............

ಶ್ರೀ ಎಂ. ವೀರಪ್ಪ ಮೊಯಿಲಿ :- ನಾವು ಅಧಿಕಾರದಲ್ಲಿ ಇದ್ದೇವೆ. ಹಿಂದೆಯೂ ಇದ್ದೇವೆ. ಇವತ್ತೂ ಇದ್ದೇವೆ ಮತ್ತೆ ಮುಂದೆಯೂ ಕೂಡ ಕಾಂಗ್ರೆಸ್ಸಿನವರೇ ಅಧಿಕಾರಕ್ಕೆ ಬರುತ್ತಾರೆ. ಆದರೆ ನೀವು ಮಾತ್ರ ಬರುವುದಿಲ್ಲ. ಮಾನ್ಯ ಸಿಂಧ್ಯಾರವರು ರಾಮರಾಜ್ಯ ಎಂದು ಹೇಳಿದರು. ಅವರ ಪರಂಪರೆ, ಪುರೋಹಿತ ಸಾಹಿತ್ಯ ನೋಡಿದರೆ, ರಾವಣನ ಪುರೋಹಿತ ಸಾಹಿತ್ಯ ನೆನಪಿಗೆ ಬರುತ್ತದೆ. ರಾವಣ ಯಾರೆಂದು ತಿಳಿದುಕೊಂಡಿದ್ದೀರಿ ........

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನನಗೆ ಸ್ವಾರಸ್ಯಕರವಾದ ಸಂಗತಿ ಜ್ಞಾಪಕ ಬರುತ್ತಿದೆ. ಅದನ್ನು ತಮ್ಮ ಜೊತೆಯಲ್ಲಿ ಮತ್ತು ಈ ಸದನದ ಸದಸ್ಯರ ಜೊತೆಯಲ್ಲಿ ಹಂಚಿಕೊಳ್ಳಬೇಕು. ನಾನು ಮತ್ತು ನಮ್ಮ ಸ್ನೇಹಿತರಾದ ಗುರುಪಾಡಪ್ಪನವರು ಹಾಗೂ ಇನ್ನೂ ಕೆಲವು ಶಾಸಕರು ಇತ್ತೀಚೆಗೆ ಡೆಲ್ಲಿಗೆ ಹೋದ ಸಂದರ್ಭದಲ್ಲಿ ತಾಜ್‌ಮಹಲ್ ನೋಡಬೇಕೆಂದು ಆಗ್ರಾಕ್ಕೆ ಹೋದೆವು, ಆ ರೀತಿ ಹೋಗತಕ್ಕ ಸಂದರ್ಭದಲ್ಲಿ ಗುರುಪಾದಪ್ಪನವರ ಮಗಳೂ ಸಹಿತ ಇದ್ದರು. ನಾವೆಲ್ಲರೂ ಹೋಗುವಾಗ ತಾಜ್‌ಮಹಲ್ ಪ್ರವೇಶ ಮಾಡಬೇಕಾದರೆ ಅಲ್ಲಿನ ಸೆಕ್ಯೂರಿಟಿಯವರು ಬಹಳ ಟೈಟ್ ಮಾಡಿದ್ದರು. ಏನಾದರೂ ಆಗಬಹುದೆಂದು ಬಹಳ ಕ್ಲೀನಾಗಿ ನಮ್ಮೆಲ್ಲನ್ನೆಲ್ಲ ಚೆಕ್ ಮಾಡಿ, ನಮ್ಮ ಬ್ಯಾಗೇಜ್ ನೋಡಿ, ಚಪ್ಪಲಿ ನೋಡಿ, ತಲೆ ನೋಡಿ ಕಳುಹಿಸುತ್ತಾರೆ. ಈ ರೀತಿ ಕಳುಹಿಸುವಾಗ ಒಬ್ಬ ಹೆಣ್ಣು ಮಗಳು ಹೇಳಿದಳು ''ನೀವೆಲ್ಲರೂ ರಾವಣ ರಾಜ್ಯಕ್ಕೆ ಹೋಗಿದ್ದಿರಿ'' ಎಂದು ಹೇಳಿದಳು. ಅಂದರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ದಕ್ಷಿಣ ಭಾರತದಲ್ಲಿ ನಾವೆಲ್ಲರೂ, ರಾವಣರ ರಾಜ್ಯದವರು ಎನ್ನುವ ಕಲ್ಪನೆ ಅವರಿಗಿದೆ. ಇದಾದ ಮೇಲೆ ನಾನು ಆಕೆಯ ಜತೆಯಲ್ಲಿ ಜಗಳ ಆಡಿದೆ. ಏಕೆ, ನಮ್ಮನ್ನು ರಾವಣರ ರಾಜ್ಯದವರೆಂದು ಹೇಳುತ್ತಿದ್ದೀರಿ ಎಂದು ಕೇಳಿದ್ದಕ್ಕೆ, ಅವಳು ಏನು ಹೇಳುತ್ತಾಳೆಂದರೆ ದಕ್ಷಿಣದಲ್ಲಿ ಆಂಜನೇಯನನ್ನು ಬಿಟ್ಟರೆ ಇನ್ನು ಯಾರು ಹುಟ್ಟಿಲ್ಲ. ರಾಮ ಉತ್ತರ ಪ್ರದೇಶದಲ್ಲಿ, ಕೈಲಾಸ ಪರ್ವತ ಇರುವ ಹಿಮಾಲಯದಲ್ಲಿ ಹುಟ್ಟಿರುವುದು, ಕೃಷ್ಣ ಹುಟ್ಟಿರುವುದು ಮಥುರಾದಲ್ಲಿ, ಈ ರೀತಿ ಇರತಕ್ಕಂಥಾದ್ದು ಎಂದು ಹೇಳಿದಳು. ಇಲ್ಲಿ, ಇವರ ರಾಮರಾಜ್ಯ ಏನಿದೆ ಎಂದರೆ, ಮೇಲುಗಡೆಯಿಂದ ಬಂದರೆ ಆಫಘಾನಿಸ್ಥಾದಿಂದ, ಆಕಡೆಯಿಂದ, ಈ ಕಡೆಯಿಂದ ನಮ್ಮನ್ನು ಆಳಿ ಹೋದರಲ್ಲ ಇದು ಅವರ ರಾಮರಾಜ್ಯ.

ಶ್ರೀ ವಾಟಾಳ್ ನಾಗರಾಜ್ :- ಇವತ್ತು ಶ್ರೀರಾಮನವಮಿ ಎಂದು ಹೇಳಿ ಎಲ್ಲಾ ಕಡೆ ಕೇಳಿದೆ. ಇವತ್ತು ರಾಮಮಂದಿರಗಳಲ್ಲಿ, ಗರಡಿಗಳಲ್ಲಿ, ರಾಮರಸ ಎಂದು ಕೊಡುತ್ತಾರೆ. ಈಗ ನನಗೆ ಸ್ವಲ್ಪ ಅನುಮಾನಗಳು ಬಂದಿವೆ. ಏನು ಪರಿಸ್ಥಿತಿ, ನಾವು ಎಲ್ಲಿಗೆ ಹೋಗುತ್ತಿದ್ದೇವೆ. ನಾನು ಒಂದು ಸಾರಿ ಬಳೆ ಪೇಟೆಯಲ್ಲಿರುವ ಗರಡಿ ಮನೆಗೆ ಹೋದೆ. ನಾನು ಚಿಕ್ಕಪೇಟೆಯ ಶಾಸಕನಾಗಿ ಹೋದಾಗ ನನಗೆ ಹಾರ ತುರಾಯಿ ಹಾಕಿದರು ಮತ್ತು ತಾವು ಸ್ವಲ್ಪ ರಾಮರಸ ತೆಗೆದುಕೊಳ್ಳಿ ಎಂದರು. ನಾನು ಈ ರಾಮರಸ ಎಂದರೆ ಪಾನಕ ಎಂದು ಕುಡಿದೆ. ಏನು ಹೇಳುತ್ತೀರಿ, ನನ್ನ ಕಾಲೇನು ಕೈಯೇನು, ನನ್ನ ಕತೆ ಏನು ಹೇಳುತ್ತೀರಿ, ಕೊನೆಗೆ ನಾನು ಸರಿ ಹೋಗಬೇಕಾದರೆ ಒಂದು ಗಂಟೆಯಾಯಿತು. ಅವತ್ತಿನ ಪರಿಸ್ಥಿತಿಯನ್ನು ದೇವರೇ ಕಾಪಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :- ನಾನು ಹೇಳಿದ್ದೆ ಒಂದು, ಮಾನ್ಯ ಸಿಂಧ್ಯಾರವರು ಕೊಂಡು ಹೋದ ದಾರಿಯೇ ಬೇರೆ ನಾನು ಏನು ಹೇಳಿದೆ. ಬಿಹಾರದ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಇದ್ದಾರೆ. ಅವರು ಒಂದು ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ, ಅಲ್ಲಿ ಯಡಿಯೂರಪ್ಪನವರ ಸಂತಾನದವರು ಏನೋ ಗಲಾಟೆ ಮಾಡುತ್ತಿದ್ದರು. ಅದು ಯಾರು, ರಜಪೂತ ಮನೆತನಕ್ಕೆ ಸೇರಿದವರು ಹೇಳುತ್ತಿದ್ದರು. ನನ್ನ ಮೇಲೆ ಏಕೆ ಗಲಾಟೆ ಮಾಡುತ್ತಿದ್ದೀರಿ. ನಿಮ್ಮ ರಾವಣನ ಗದ್ದಲ ಏಕೆ, ರಾವಣ ಯಾವ ಪಂಗಡಕ್ಕೆ ಸೇರಿದ್ದುದು ಎಂದರೆ, ರಾವಣ ನಿಮ್ಮ ರಜಪೂತ ಮನೆತನಕ್ಕೆ ಸೇರಿದವರು. ಸೀತೆಯನ್ನು ಅಪಹರಿಸಿಕೊಂಡು ಹೋದಂತ ಪಕ್ಷದವರು ಅವರಿಗೆ ವಿರೋಧ ಮಾಡಬೇಕೇ ಹೊರತು ನಮಗೆ ಏಕೆ ಮಾಡುತ್ತೀರಿ. ನಿಮ್ಮ ಪಕ್ಷ ರಾವಣನ ಪಕ್ಷ, ಈ ಪುರೋಹಿತ ಶಾಹಿತ್ವ ಏನಿದೆ ಪೌರೋಹಿತ್ಯ ವಹಿಸಿದ ರಾವಣನ ಸಂತಾನಕ್ಕೆ ಸೇರಿದಂತ, ಅವನ ಉತ್ಪತ್ತಿಯಿಂದ ಬಂದಂಥ ನಿಮ್ಮ ಪಕ್ಷ. ಆದ್ದರಿಂದ ಬ್ಯಾಕ್‌ವರ್ಡ್ ಕ್ಲಾಸ್‌ನವರು ಮತ್ತೊಬ್ಬರು ಎನ್ನುವ ಪ್ರಶ್ನೆಯಲ್ಲ. ರಜಪೂತರು ರಾಮ, ಕೃಷ್ಣನ ಜಾತಿಗೆ ಸೇರಿದವರು. ರಾವಣ ರಾಜ್ಯ ಎಂದರೆ ರಾವಣರಾಜ್ಯವನ್ನು ಪ್ರತಿಷ್ಠಾಪನೆ ಮಾಡುವುದಕ್ಕೆ, ಪುನರುದ್ಧಾರ ಮಾಡುವುದಕ್ಕೆ ಹೊರಟವರು ತಾವು.

ಶ್ರೀ ವಾಟಾಳ್ ನಾಗರಾಜ್ :- ಅಂತೂ ಕೊನೆಗೂ ತಾವು ರಾಮನನ್ನು ಒಪ್ಪಿದಿರಿ.

ಶ್ರೀ ಎಂ. ವೀರಪ್ಪ ಮೊಯ್ಲಿ :- ರಾಮ ನಮ್ಮವ.

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಸಿಂಧ್ಯಾರವರು ಕಥೆ ಹೇಳಿ ಕಾಂಗ್ರೆಸಿಗೆ ಹೋಲಿಸಿದರು. ರಾವಣ ದಕ್ಷಿಣದವ ಎಂದು ಅಂದುಕೊಳ್ಳುವ ಸ್ಥಿತಿಗೆ ಬಂದಿದ್ದೇವೆ. ಅವರು ನಿಮ್ಮನ್ನು ಚುಚ್ಚಿ ಮಾತನಾಡಿದರು. ನೀವು ಅವರನ್ನು ನಂಬಿದಿರಿ. ನಾವೇನು ಮಾಡುವುದು.

Sri P.G.R. Sindia :- Inbetween BJP and Congress my vote is for Congress..... ತಾವು ಸುಮ್ಮನೆ ತಪ್ಪು ತಿಳಿದುಕೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ :- ಈ ಪುರೋಹಿತ ಶಾಹಿತ್ವ ಏನಿದೆ, ಅದು ಈ ದೇಶವನ್ನು, ಪುನಃ ನೂರಾರು ವರ್ಷಗಳ ಹಿಂದೆ ಹಬ್ಬತಕ್ಕಂಥ, ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರಿಸುವುದಕ್ಕೆ ಮತ್ತು ಸದೆಬಡಿಯುವುದಕ್ಕೆ ನಾವೆಲ್ಲರೂ ಒಂದೇ. We are all United don't worry about it.

ಶ್ರೀ ಬಿ.ಎಸ್.ಯಡಿಯೂರಪ್ಪ :- ನಿಮ್ಮನ್ನು ಮುಗಿಸುವುದಕ್ಕೆ ಈ ನಾಡಿನ ಜನ ಒಗ್ಗಟ್ಟಾಗುತ್ತಾರೆ. ದೇಶದ ಜನ ಒಗ್ಗಟ್ಟಾಗುತ್ತಾರೆ. ಈ ದೇಶದಲ್ಲಿ ಕಾಂಗ್ರಸ್ ನಿರ್ನಾಮವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ :- ತಾವು ಹೇಳಿದಿರಿ, ಒಬ್ಬ ಅಧಿಕಾರಿ ಮಾತ್ರ, ಬಾಕಿಯವರು ನಿವೃತ್ತರಾಗಿದ್ದಾರೆ. ಪಕೀರಪ್ಪ, ಭೀಮಪ್ಪ, ಎಗ್ಸಿಕ್ಯೂಟಿವ್ ಇಂಜಿನಿಯರ್, ಬೆಳಗಾಂ. He is in service and we are sending thin report to PWD and they will take appropriate action to suspend him... ಹಣ ವಸೂಲು ಮಾಡುವುದಕ್ಕೆ, ಪ್ರಿಲಿಮನರಿ ವರದಿ ನಮಗೆ ಬಂದಿದೆ. ಅದರ ಆಧಾರದ ಮೇಲೆ ಹಣ ವಸೂಲ್ ಮಾಡುವುದಕ್ಕೆ ಏನುಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. We are not going to interfere. Let their be no polical inteference either from the Government in office or Opposition including Mr. Yediyurappa. Let there be no political influence or pressure on the COD so that it could make proper enquiry. ಯಾರೇ ಇದ್ದರೂ ಕೂಡ, ಯಾವ ರೀತಿಯ ರಕ್ಷಣೆ ಮಾಡತಕ್ಕ ಪ್ರಶ್ನೆ ಖಂಡಿತವಾಗಿಯೂ ಇರುವುದಿಲ್ಲ. Let the truth come out. We want them to complete the enquiry in a systematic, thorough and scientific way.

ಶ್ರೀ ಬಿ. ಎಸ್. ಯಡಿಯೂರಪ್ಪ :- ಸಿಓಡಿಯವರು ತಾತ್ಕಾಲಿಕ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಸದನದಲ್ಲಿ ಇಡದೆ, ಸತ್ಯಕ್ಕೆ ದೂರವಾದ ಮಾಹಿತಿಯನ್ನು ಕೊಡುತ್ತಿದ್ದೀರಿ, ಅವರಿಗೆ ರಕ್ಷಣೆ ಕೊಡುತ್ತಿದ್ದೀರಿ. ನಿಮ್ಮ ನೀತಿಯನ್ನು ಪ್ರತಿಭಟನೆ ಮಾಡಿ, ನಾವು ಹೊರಗೆ ಹೋಗುತ್ತೇವೆ. ತಾವು ಮುಖ್ಯ ಮಂತ್ರಿಯಾಗಿ, ಕಾಗೋಡು ತಿಮ್ಮಪ್ಪನವರನ್ನು ಉಳಿಸುವುದಕ್ಕೆ ಮತ್ತು ಅವರಿಗೆ ರಕ್ಷಣೆ ಕೊಡುವ ಕೆಲಸ ಮಾಡುತ್ತಿದ್ದೀರಿ. ಇದನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ :- ಸ್ವಲ್ಪ ಇರಿ, ಅವಸರ ಮಾಡಬೇಡಿ. ಏಕೆಂದರೆ, ನೀವು ಹೊರಗಡೆ ಹೋದ ಮೇಲೆ, ವೀರಪ್ಪ ಮೊಯಿಲಿಯವರು ಮಾತನಾಡಿದರು ಎಂಬುದು ಬೇಡ.

( ಈ ಹಂತದಲ್ಲಿ ಬಿ.ಜೆ.ಪಿ ಸದಸ್ಯರು ಸಭಾತ್ಯಾಗ ಮಾಡಿದರು)

ಬಿಜಾಪುರ ನಗರ ಮತ್ತು ಸುತ್ತಮುತ್ತ ಇರತಕ್ಕ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆ

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ದೇಶಪಾಂಡೆಯವರಿಗೆ ಮತ್ತ ನನಗೆ, ತಂತಿ ಮೂಲಕ ಒಂದು ಸಂದೇಶ ಬಂದಿದೆ. ಈ ಸಂದೇಶವನ್ನು ತಮಗೂ ಕಳುಹಿಸಿ ಕೊಟ್ಟಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಿ, ವಿಶೇಷವಾಗಿ, ಬಿಜಾಪುರ ನಗರ ಮತ್ತು ಸುತ್ತಮುತ್ತ ಇರತಕ್ಕ ಹಳ್ಳಿಗಳಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ತಮಗೆ ಗೊತ್ತಿರುವ ಹಾಗೆ ಬೇಸಿಗೆ ಕಾಲ ಬಂದಿರುವುದರಿಂದ ಬೆಳಗಾಂ, ವಿಜಾಪುರ, ಮುಂತಾದ ಕೆಲವು ಭಾಗಗಳಲ್ಲಿ ಉಷ್ಣಾಂಶ ಜಾಸ್ತಿ ಇರುವುದರಿಂದ ಕುಡಿಯುವ ನೀರಿಗೆ ತೊಂದರೆ ಬಂದಿರುವುದರಿಂದ ಈ ಆಮಶಂಕೆ ಮತ್ತು ಕಾಲರಾ ರೋಗ ಹೆಚ್ಚಾಗುವ ಸಂಭವ ಇದೆ. ಜೊತೆಗೆ ಕೃಷ್ಣ ನದಿಯು ಸಂಪೂರ್ಣವಾಗಿ ಬತ್ತಿರುವುದರಿಂದಾಗಿ, ನದಿಯಿಂದ ಕುಡಿಯುವ ನೀರು ಸಿಗುತ್ತಾ ಇಲ್ಲ. ಪ್ರಾಣಿಪಕ್ಷಿಗಳಿಗೂ ಕೂಡ ಕುಡಿಯಲು ನೀರು ಸಿಗುತ್ತಾ ಇಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರ ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಜೊತೆಗೆ ಸಂಪರ್ಕ ಮಾಡಿ ಕೊಯ್ನಾ ನದಿಯಿಂದ ರಾಜ್ಯದ ಈ ಜಿಲ್ಲೆಗೆ ಕುಡಿಯುವ ನೀರಿನ ಸಲುವಾಗಿ ಒಂದೆರಡು ಟಿಎಂಸಿ ನೀರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡಿ, ಈ ಒಂದು ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಯಾಕೆಂದರೆ ಕಳೆದ ಏಳೆಂಟು ವರ್ಷಗಳಿಂದ ನಮ್ಮ ಸರಕಾರ ಇದ್ದಂಥ ಸಂದರ್ಭದಲ್ಲಿಯೂ ಕೂಡ, ಬಿಜಾಪುರ ಜಿಲ್ಲೆಗೆ ಕುಡಿಯುವ ನೀರಿನ ತೊಂದರೆ ಬಂದಂಥ ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ನಾವು ಮಹಾರಾಷ್ಟ್ರ ಸರಕಾರದವರ ಜೊತೆಗೆ ಸಂಪರ್ಕ ಮಾಡಿ, ಕೊಯ್ನಾ ನದಿಯಿಂದ ನೀರನ್ನು ಬಿಡುಗಡೆ ಮಾಡಲು ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಬೇಕಾದಂಥ ಹಣವನ್ನು ಕೊಡುವ ವಿಚಾರದಲ್ಲಿಯೂ ಕೂಡ ನಾವು ಕ್ರಮ ಜರುಗಿಸಿದ್ದೇವೆ. ಈಗ ಅಲ್ಲಿ ನದಿ ಬತ್ತಿ ಹೋಗಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ಈಗಾಗಲೇ ಉಪಮುಖ್ಯಮಂತ್ರಿಯವರು ಒಂದು ಕಡೆ ಈ ಬಗ್ಗೆ ಹೇಳಿದ್ದರೆ ಎಂಬುದನ್ನು ನಾನು ಕೇಳಿದ್ದೇನೆ. ಮಹಾರಾಷ್ಟ್ರ ಸರಕಾರದ ಜೊತೆಗೆ ಸಂಪರ್ಕ ಮಾಡಿ ನೀರು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದು ಏನು ಮಾಡಿದ್ದಾರೆ ಎಂಬ ಬಗ್ಗೆ ಹೇಳಬೇಕು. ಈಗಾಗಲೇ ಆ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲವಾದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಎಲ್ಲರೂ ಒತ್ತಾಯ ಮಾಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ನಾನು ಸರಕಾರದವರು ಈಗಾಗಲೇ ಕ್ರಮ ತೆಗೆದುಕೊಂಡಿರಬಹುದು ಎಂದು ಅಂದುಕೊಂಡಿದ್ದೆ. ಇವೊತ್ತು ತಂತಿ ಮತ್ತು ಟೆಲಿಫೋನ್ ಕೂಡ ನಮಗೆ ಬಂದಿದೆ. ಅಲ್ಲಿ ಕುಡಿಯುವ ನೀರಿಲ್ಲ. ನಮ್ಮ ಸರಕಾರ ಇದ್ದಾಗ ಕೋಯ್ನಾದಿಂದ ಅಲ್ಲಿಗೆ ನೀರು ಬಿಡುಗಡೆ ಮಾಡಲು ಕ್ರಮ ಜರುಗಿಸಿಕೊಂಡಿದ್ದೆವು. ಆದ್ದರಿಂದ ಇದು ಅಷ್ಟು ದೊಡ್ಡ ಕೆಲಸವಲ್ಲ, ತಾವುಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಗೆ ಸಂಪರ್ಕ ಸಾಧಿಸಿ, ಪ್ರಯತ್ನ ಮಾಡಬೇಕು. ಮಾನ್ಯ ಕಂದಾಯ ಸಚಿವರಲ್ಲಿ ನನ್ನ ವಿನಂತಿ ಏನೆಂದರೆ ಅಲ್ಲಿಕುಡಿಯುವ ನೀರಿನ ಅಭಾವ ಇರುವುದರಿಂದ ಅಲ್ಲಿಗೆ ಕುಡಿಯುವ ನೀರಿಗಾಗಿ ಸಾಕಷ್ಟು ಹಣವನ್ನು ತಾವುಗಳು ಬಿಡುಗಡೆ ಮಾಡಬೇಕಾಗುತ್ತದೆ. ಆ ಬಗ್ಗೆ ಕಡೆಗಳಿಂದ ದೂರುಗಳು ಬರಲು ಪ್ರಾರಂಭವಾಗಿದೆ. ಆದ್ದರಿಂದ ಕುಡಿಯುವ ನೀರಿನ ಅಭಾವ ಎಲ್ಲಿದೆ ಅಲ್ಲಿಗೆ ಅವಶ್ಯಕತೆಯನ್ನು ಕಂಡು ಹಣವನ್ನು ಕೂಡಲೇ ಬಿಡುಗಡೆ ಮಾಡಿ. ಸಕಾಲದಲ್ಲಿ ಈ ಬಗ್ಗೆ ಹಣವನ್ನು ಬಿಡುಗಡೆ ಮಾಡಬೇಕು. ಅದನ್ನು ಬಿಟ್ಟು ಕೊನೇ ಘಳಿಗೆಯಲ್ಲಿ ಹಣ ಕೊಟ್ಟರೆ ಯಾವುದೇ ಸೂಕ್ತ ಪ್ಲಾನ್ ಮಾಡಲು ಆಗುವುದಿಲ್ಲ. ಆದ್ದರಿಂದ ಅಧಿಕಾರಿಗಳಿಗೆ ಹೇಳಿ ಎಲ್ಲಿ ಬೋರ್‌ವೆಲ್ ಬೇಕು, ಎಲ್ಲಿ ಒಪನ್‌ವೆಲ್ ಬೇಕು. ಎಂಬ ಬಗ್ಗೆ ಕಾರ್ಯಕ್ರಮ ತೆಗೆದು ಕೊಳ್ಳಲು ಪ್ಲಾನ್ ಮಾಡಿಸಿ. ಮತ್ತು ಬಿಜಾಪುರಕ್ಕೆ ಕುಡಿಯುವ ನೀರನ್ನುಒದಗಿಸಲು ಮಹಾರಾಷ್ಟ್ರದ ಮುಖ್ಯಮಂತ್ರಿಯರ ಜೊತೆಗೆ ಮಾತನಾಡಿ ನೀರನ್ನು ಬಿಡುಗಡೆ ಮಾಡಲು ಕೇಳಿಕೊಂಡು ಕ್ರಮ ತೆಗೆದು ಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ. ನಮ್ಮ ಸರ್ಕಾರ ಇದ್ದಾಗ ಈ ಸಮಸ್ಯೆಯನ್ನು ನಾವು ಮಾತುಕತೆಯ ಮೂಲಕ ಬಗೆಹರಿಸಿದ್ದೆವು.

ಶ್ರೀ ಹೆಚ್.ವೈ. ಮೇಟಿ:- ಮಾನ್ಯ ಅಧ್ಯಕ್ಷರೆ ನಮ್ಮ ನಾಯಕರುಗಳು ಹೇಳಿದ ಹಾಗೆ ಕೃಷ್ಣಾನದಿ ಒಂದೇ ಬತ್ತಿಲ್ಲ, ಮಲಪ್ರಭವು ಕೂಡ ಬತ್ತಿದೆ. ಹೀಗಾಗಿ ಬಾದಾಮಿ ಮತ್ತು ಹುನಗುಂದ ತಾಲೂಕಿನ ಕೆಲವು ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದೆ. ನಿಂತ ನೀರನ್ನು ಕುಡಿಯುವುದರಿಂದ ಕಾಲರ ರೋಗವು ಬಹಳ ಕಡೆಗಳಲ್ಲಿ ಹಬ್ಬಿದೆ. ಗುಳೇದ ಗುಡ್ಡದಲ್ಲಿ ನಲವತ್ತಾಲ್ಕು ಕೇಸ್‌ಗಳು ದಾಖಲೆಯಾಗಿವೆ. ಮತ್ತು ಸುಳೆಬಾವಿಯಲ್ಲಿ 3 ಜನರು ಕಾಲರದಿಂದ ಸತ್ತಿದ್ದಾರೆ. ಅದು ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಆದ್ದರಿಂದ ನವಿಲು ತೀರ್ಥದಿಂದ ನಮಗೆ ನೀರು ಒದಗಿಸಿದರೆ ಕುಡಿಯುವ ನೀರು ನಮಗೆ ಅನುಕೂಲವಾಗುತ್ತದೆ. ಗುಳೇದಗುಡ್ಡದಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯು ಬಹಳ ಹದಗೆಟ್ಟಿದೆಯಾದ ಕಾರಣ ನವಿಲು ತೀರ್ಥದಿಂದ ಕುಡಿಯುವ ನೀರನ್ನು ಬಿಡುಗಡೆ ಮಾಡಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನನ್ನ ಕ್ಷೇತ್ರದ ಬಹಳ ಪಿಹೆಚ್‌ಇ ಗಳಲ್ಲಿ ಡಾಕ್ಟರ್‌ಗಳು ಇಲ್ಲ. ಅಲ್ಲಿಗೆ ಕೂಡಲೇ ಡಾಕ್ಟರ್‌ಗಳನ್ನು ನೇಮಿಸಿ ಕಾಲರ ರೋಗವನ್ನು ನಿಯಂತ್ರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು, ಸಿಂಧ್ಯಾರವರು, ಮೇಟಿಯವರು ಎತ್ತಿದಂತಹ ಪ್ರಶ್ನೆಯು ಬಿಜಾಪುರಕ್ಕೆ ವಿಶೇಷತಃ ಕುಡಿಯುವ ನೀರಿನ ಸರಬರಾಜಿನ ಕುರಿತದ್ದಾಗಿದೆ. ನಾನು ಸ್ವತಃ ಎರಡು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಯವರಾದ ಶರದ್ ಪವಾರ್‌ರವರ ಜೊತೆಗೆ ಮಾತನಾಡಿದ್ದೇನೆ. ಕಡೆ ಪಕ್ಷ 5 ಟಿಎಂಸಿ ನೀರನ್ನು ಕೊಯ್ನಾದಿಂದ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ನಮಗೆ ಮತ್ತು ಅವರಿಗೆ ಇರುವ ಒಂದು ಸಂಶಯ ಅಂದರೆ ಮತ್ತು ಅವರಿಗೂ ಕೂಡ ಆ ಡ್ಯಾಮ್‌ನಲ್ಲಿ ರಿಕ್ವಯರ್‌ಮೆಂಟ್ ಸ್ಟೊರೇಜ್ ಇರಬೇಕಾದದ್ದು 40 ಟಿಎಂ.ಸಿ. ನೀರು. ಇದು ಇರಬೇಕಾಗುತ್ತದೆ. ಅದಕ್ಕೂ ಕಡಿಮೆ ಸ್ಟೋರೇಜ್ ಇದ್ದು ನಮಗೆ ತೊಂದರೆ ಇದೆ ಎಂದು ಅವರು ನಮಗೆ ಹೇಳಿದರು. ಹಾಗೆಯೇ ನೀರು ನಮಗೆ ಬಿಟ್ಟರೂ ಕೂಡ ಅಲ್ಲಲ್ಲಿ ನೀರಾವರಿಗಾಗಿ ಈ ನೀರನ್ನು ಹಿಡಿದುಕೊಳ್ಳುತ್ತಾರೆ. ಹಾಗಾಗಿ ನೀರು ತಲುಪುವುದಿಲ್ಲ ಎಂಬ ಶಂಕೆ ಅವರಿಗೂ ನಮಗೂ ಇದೆ. ಆದರೂ ಕೂಡ ಕಡಿಮೆ ಪಕ್ಷ ಮೂರು ಟಿಎಂಸಿ ನೀರನ್ನಾದರೂ ಬಿಡಿ ಎಂದು ಹೇಳಿದ್ದಕ್ಕೆ ನಾನು ಬಿಡುಗಡೆ ಮಾಡುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ಭರವಸೆಯನ್ನು ನಮಗೆ ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ಇರಿಗೇಶನ್ ಸೆಕ್ರೆಟರಿ ಅಲ್ಲಿನ ಇರಿಗೇಶನ್ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದಾರೆ. ಇವೊತ್ತು ನಾಳೆ ಆ ಬಗ್ಗೆ ಮಾತುಕತೆ ಮಾಡಿ ನೀರು ಬಿಡುಗಡೆ ಮಾಡಲು ವಿನಂತಿಸಿಕೊಳ್ಳುತ್ತೇನೆ. ಆ ಪ್ರಯತ್ನವನ್ನು ಮುಂದುವರೆಸುತ್ತೇವೆ ಇನ್ನು ನವಿಲುತೀರ್ಥದಿಂದ ನೀರು ಸರಬರಾಜು ಮಾಡುವ ಬಗ್ಗೆ ನಾನು ವಿಚಾರ ಮಾಡುತ್ತೇನೆ. ನನಗೆ ಅದರ ಬಗ್ಗೆ ಸರಿಯಾದಂತಹ ಮಾಹಿತಿಗಳು ಇಲ್ಲ. ಕರ್ನಾಟಕ ರಾಜ್ಯದಾದ್ಯಂತ ಕುಡಿವ ನೀರಿನ ಸಮಸ್ಯೆ ಇದೆ, ಅದನ್ನು ನೋಡಿ ಹಣ ಬಿಡುಗಡೆ ಮಾಡುತ್ತೇವೆ. ಬಿಜಾಪುರಕ್ಕೆ ಹಣ ಬಿಡುಗಡೆ ಮಾಡಿದ್ದೇವೆ. ಬೇರೆ ಕಡೆಗಳಲ್ಲಿ ಎಲ್ಲೆಲ್ಲಿ ಸಮಸ್ಯೆ ಇದೆ, ಅದನ್ನು ನೋಡಿ ಆದ್ಯತೆಯ ಮೇರೆಗೆ ಹಣವನ್ನು ಬಿಡುಗಡೆ ಮಾಡುತ್ತೇವೆ. ಮಾನ್ಯ ಕಂದಾಯಸಚಿವರು ಈ ಬಗ್ಗೆ ಈಗಾಗಲೇ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇದು ನಮ್ಮ ಗಮನದಲ್ಲಿದೆ ಎಂಬುದನ್ನು ತಿಳಿಸಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ :-ಮಾನ್ಯ ಅಧ್ಯಕ್ಷರೇ, ಈಗಾಗಲೇ 6 ಗಂಟೆಯಾಗಿದೆ. ನಾನು ಮಹತ್ವದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ತಮ್ಮಲ್ಲಿ ಅನುಮತಿಯನ್ನು ಕೂಡ ತೆಗೆದುಕೊಂಡಿದ್ದೇನೆ.

ಅಧ್ಯಕ್ಷರು :- ಅನುಮತಿ ಇದೆಯೆಂದು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಾವು ಮಾಡಲು ಆಗುವುದಿಲ್ಲ. ತಮ್ಮ ಪ್ರಸ್ತಾಪವನ್ನು ನಾಳೆ ತೆಗೆದುಕೊಳ್ಳಿ. ಈಗ ಒಂದು ಪ್ರಕಟಣೆ ಇದೆ.

## ಪ್ರಕಟಣೆ

ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಒಂದು ಸಂದೇಶವು ಬಂದಿದೆ ಎಂದು ತಿಳಿಸುತ್ತೇನೆ.